# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಆಗಸ್ಟ್ 21, 2020

ಸಂಪುಟ : 47 ಸಂಚಿಕೆ : 103 ದೂರವಾಣಿ : 254736 : 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com Email: janathavani@mac.com


## ಸ್ವಚ್ಛತಾ ಸಮೀಕ್ಷೆ: ಕೊನೆ ಸಾಲಿನಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ

ದಾವಣಗೆರೆ, ಆ. 20 - ಕೇಂದ್ರ ಸರ್ಕಾರ ನಡೆಸಿದ ಸ್ವಚ್ಛ ಸರ್ವೇಕ್ಷಣ್ - 2020 ಸ್ವಚ್ಛತಾ ಸಮೀಕ್ಷೆಯಲ್ಲಿ ಸ್ಮಾರ್ಟ್ ಸಿಟಿಯಾದ ದಾವಣಗೆರೆ ರಾಜ್ಯದಲ್ಲಿ ಕೊನೆಯ ಐದು ನಗರಗಳ ಸಾಲಿಗೆ ದೂಡಲ್ಪಟ್ಟಿದೆ.

ರಾಜ್ಯದ ಒಂದರಿಂದ ಹತ್ತು ಲಕ್ಷ ಜನಸಂಖ್ಯೆಯ 25 ನಗರಗಳಲ್ಲಿ ಸ್ವಚ್ಛತೆಯ ಸಮೀಕ್ಷೆ ನಡೆಸಲಾಗಿತ್ತು. ಕೇಂದ್ರ ವಸತಿ ಹಾಗೂ ನಗರ ವ್ಯವ ಹಾರಗಳ ಸಚಿವಾಲಯ ಬೃಹತ್ ಸಮೀಕ್ಷೆ ನಡೆಸಿ ವರದಿ ರೂಪಿಸಿತ್ತು.

ಅದರ ಪ್ರಕಾರ ದಾವಣಗೆರೆ 21ನೇ ಸ್ಥಾನದಲ್ಲಿದೆ. ಒಟ್ಟು ನಿಗದಿಯಾದ 6,000 ಅಂಕಗಳಿಗೆ ನಡೆದ ಸಮೀಕ್ಷೆಯಲ್ಲಿ ದಾವಣಗೆರೆಯು 1,673.41 ಅಂಕ ಪಡೆದಿದೆ.

ದಾವಣಗೆರೆ ಹೊರತು ಪಡಿಸಿದರೆ ಗಂಗಾವತಿ, ಬಿಜಾಪುರ, ರಾಯಚೂರು ಹಾಗೂ ರಾಬರ್ಟ್‌ಸನ್ ಪೇಟೆಗಳು ಕೊನೆಯ ಐದು ಸ್ಥಾನಗಳಲ್ಲಿವೆ. ಮೈಸೂರು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ತುಮಕೂರು, ಹುಬ್ಬಳ್ಳಿ - ಧಾರವಾಡ, ಮಂಗಳೂರು ಹಾಗೂ ಚಿತ್ರದುರ್ಗಗಳಿವೆ. ಸ್ವಚ್ಛತೆಗಾಗಿ ಗಳಿಸುವ ಅಂಕದಲ್ಲಿ ಮೈಸೂರು 5,298.61 ಅಂಕ ಗಳಿಸಿದ್ದು ರಾಜ್ಯದ ಇತರೆಲ್ಲ ನಗರಗ ಳಿಗಿಂತ ಮುಂಚೂಣಿಯಲ್ಲಿದೆ. ಆ ನಗರ ದಾವಣಗೆರೆಗಿಂತ ಮೂರು ಪಟ್ಟು ಹೆಚ್ಚು ಅಂಕ ಗಳಿಸಿದೆ.



**ಮೊದಲ ಸ್ಥಾನದಲ್ಲಿ ಮೈಸೂರು 21ನೇ ಸ್ಥಾನದಲ್ಲಿ ದಾವಣಗೆರೆ**

ಎರಡನೇ ಸ್ಥಾನದಲ್ಲಿರುವ ತುಮಕೂರು 3,863.66 ಅಂಕ ಗಳಿಸಿದ್ದು, ದಾವಣಗೆರೆಗಿಂತ ಎರಡು ಪಟ್ಟು ಹೆಚ್ಚಾಗಿದೆ. 2019ರಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ದಾವಣಗೆರೆ ನಗರ ರಾಷ್ಟ್ರ ಮಟ್ಟದಲ್ಲಿ 375ನೇ ಸ್ಥಾನ (2ನೇ ಪುಟಕ್ಕೆ)

### ರಾಜ್ಯಕ್ಕೆ ಕೊನೆಯಿಂದ 2ನೇ ಸ್ಥಾನ

ನವದೆಹಲಿ, ಆ. 21 - ಕೇಂದ್ರ ಸರ್ಕಾರ ನಡೆಸಿದ ಸ್ವಚ್ಛತಾ ಸಮೀಕ್ಷೆಯಲ್ಲಿ ಕರ್ನಾಟಕವು ಕೊನೆಯಿಂದ ಎರಡನೇ ಸ್ಥಾನದಲ್ಲಿದೆ.

100ಕ್ಕೂ ಹೆಚ್ಚು ನಗರ ಸ್ಥಳಿಯ ಸಂಸ್ಥೆಗಳಿರುವ ರಾಜ್ಯ ಹಾಗೂ 100ಕ್ಕೂ ಕಡಿಮೆ ನಗರ ಸ್ಥಳಿಯ ಸಂಸ್ಥೆಗಳಿರುವ ರಾಜ್ಯಗಳೆಂಬ ಎರಡು ವಿಭಾಗಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಕರ್ನಾಟಕವು 100ಕ್ಕೂ ಹೆಚ್ಚು ನಗರ ಸ್ಥಳಿಯ ಸಂಸ್ಥೆಗಳಿರುವ ರಾಜ್ಯಗಳ ಪಟ್ಟಿಯಲ್ಲಿತ್ತು.

ಈ ಪಟ್ಟಿಯಲ್ಲಿನ 12 ರಾಜ್ಯಗಳಲ್ಲಿ ಕರ್ನಾಟಕ 11 ಸ್ಥಾನದಲ್ಲಿದೆ. ಬಿಹಾರ ಮಾತ್ರ ಕರ್ನಾಟಕಕ್ಕಿಂತ ಕೆಳಗಿದ್ದು ಕೊನೆಯ ಸ್ಥಾನದಲ್ಲಿದೆ. ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ನಡೆಸಿದ ಸಮೀಕ್ಷೆಯಲ್ಲಿ ಛತ್ತೀಸ್‌ಘಡ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ ಹಾಗೂ ಮಧ್ಯ ಪ್ರದೇಶಗಳಿವೆ. ಸಮೀಕ್ಷೆಯಲ್ಲಿ ಛತ್ತೀಸ್‌ಘಡ 3,293.56 ಅಂಕ ಗಳಿಸಿದೆ. ಕರ್ನಾಟಕ ಕೇವಲ 940.65 ಅಂಕ ಪಡೆದಿದೆ. ಕೊನೆಯ (2ನೇ ಪುಟಕ್ಕೆ)

## ಆನೆಕೊಂಡದ ಜಿ.ಡಿ. ದೇವರಾಜ ನಿಧನ



ದಾವಣಗೆರೆ ಸಿಟಿ ಆನೆಕೊಂಡ ಗ್ರಾಮದ ವಾಸಿ,
ಲಿಂ. ಶ್ರೀ ಗೌಡ್ರು ದಾನಪ್ಪ ಮತ್ತು
ಲಿಂ. ಶ್ರೀಮತಿ ಈರಮ್ಮ ದಂಪತಿ ಪುತ್ರರೂ,
ಗಣೇಶ ಶಾಮಿಯಾನ ಸಪ್ಲೈಯರ್ಸ್ ಹಾಗೂ
ರುಚಿ ಪೇಂಟ್ಸ್ ಮಾಲೀಕರೂ ಆದ

**ಶ್ರೀ ಜಿ.ಡಿ. ದೇವರಾಜ**

ಅವರು ದಿನಾಂಕ 20.08.2020ರ ಗುರುವಾರ ಸಂಜೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 48 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸಹೋದರರು - ಸಹೋದರಿಯರು, ಮಾವಂದಿರು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.08.2020ರ ಗುರುವಾರ ರಾತ್ರಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**

- **ಜಿ. ಬಸವರಾಜ್,** ಕಾವ್ಯ ಪ್ರಾವಿಜನ್ ಸ್ಟೋರ್ಸ್, ಕೆ.ಆರ್. ಮಾರ್ಕೆಟ್, ದಾವಣಗೆರೆ-1.
- **ಡಿ.ಜಿ. ರುದ್ರಮುನಿ,** ಗಣೇಶ ಶಾಮಿಯಾನ ಎಂಟರ್‌ಪ್ರೈಸಸ್, ಹದಡಿ ರಸ್ತೆ, ದಾವಣಗೆರೆ-5.
- **ಜಿ. ಷಣ್ಮುಖಪ್ಪ,** ಸ್ಪಂದನ ಅಂಡ್ ಕೋ., ಕೆ.ಆರ್. ಮಾರ್ಕೆಟ್, ದಾವಣಗೆರೆ-1.

**ಆನೆಕೊಂಡದ ಗೌಡ್ರ ವಂಶಸ್ಥರು**

## ಅಶಾಂತಿ ಸಂಘಟನೆ ನಿಷೇಧಕ್ಕೆ ಕಾನೂನು

ಬೆಂಗಳೂರು, ಆ. 20 - ರಾಜ್ಯದಲ್ಲಿ ಪದೇ ಪದೇ ಅಶಾಂತಿ ಮೂಡಿಸಿ, ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟ ಮಾಡುತ್ತಿರುವ ಎಸ್‌ಡಿಪಿಐ ಸೇರಿ ದಂತೆ ಕೆಲವು ಸಂಘಟನೆಗಳನ್ನು ನಿಷೇಧಿ ಸಲು ಅಗತ್ಯ ಕಾನೂನು ತರಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಎಸ್‌ಡಿಪಿಐ ಸಂಘಟನೆಯನ್ನು ನಿಷೇಧ ಮಾಡುವ ತೀರ್ಮಾನ ಕೈಗೊಂಡು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕೆಂದು ಬಿಜೆಪಿ ಮೂಲದ ಬಹುತೇಕ ಸಚಿವರು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರನ್ನು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಕಾನೂನು ಇಲಾಖೆಯ ಸಲಹೆ ಪಡೆದ ಮುಖ್ಯಮಂತ್ರಿ ಯಡಿಯೂರಪ್ಪ ನವರು, ಉತ್ತರ ಪ್ರದೇಶದಲ್ಲಿ ತಂದಿರುವ

**ರಾಜ್ಯ ಸಚಿವ ಸಂಪುಟದ ತೀರ್ಮಾನ**

ಕಾನೂನನ್ನು ರಾಜ್ಯದಲ್ಲೂ ಅನುಷ್ಠಾನಗೊಳಿ ಸುವುದು ಮತ್ತು ಇಂತಹ ಸಂಘಟನೆ ನಡೆಸುವ ಕೃತ್ಯಗಳ ಬಗ್ಗೆ ಗೃಹ ಇಲಾಖೆಯಿಂದ ಮಾಹಿತಿ ಪಡೆದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳೋಣ ಎಂದು ಹೇಳಿದ್ದಾರೆ.

ನಗರದಲ್ಲಿ ಇತ್ತೀಚಿಗೆ ನಡೆದ ಗಲಭೆಕೋರ ರಿಂದಲೇ ನಷ್ಟವನ್ನು ತುಂಬಿಸಿಕೊಳ್ಳಲು ತೀರ್ಮಾನ ಕೈಗೊಂಡಿದ್ದರು, ಅಷ್ಟೇ ಅಲ್ಲ ಈ ಸಂಬಂಧ ಹೈಕೋರ್ಟ್‌ಗೆ ಮನವಿ (2ನೇ ಪುಟಕ್ಕೆ)

## ರೈತರಿಂದಲೇ ಬೆಳೆ ಹಾನಿ ಸಮೀಕ್ಷೆ

ಬೆಂಗಳೂರು, ಆ. 20 - ಕೊರೋನಾ ಸೋಂಕಿನ ನಡುವೆಯೇ ವಿಧಾನಮಂಡಲದ ಅಧಿವೇಶನ ಕರೆಯುವ ತೀರ್ಮಾನ ಕೈಗೊಂಡಿ ರುವ ರಾಜ್ಯ ಸಚಿವ ಸಂಪುಟ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಬೆಳೆ ನಷ್ಟವುಂಟಾದಲ್ಲಿ ರೈತರೇ ಸಮೀಕ್ಷೆ ನಡೆಸಿ, ಕಂದಾಯ ಇಲಾಖೆಗೆ ವರದಿ ನೀಡುವಂತಹ ಮಹತ್ವದ ತೀರ್ಮಾನವನ್ನು ಕೈಗೊಂಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಬೆಳೆ ಸಮೀಕ್ಷೆಯನ್ನು ರೈತರಿಗೆ ಬೆಳೆ ಪರಿಹಾರ ಕೊಡಲು ರಾಷ್ಟ್ರದಲ್ಲಿಯೇ ಮೊಟ್ಟ ಮೊದಲ ಬಾರಿಗೆ ರೈತರು ತಮ್ಮ ಜಮೀನಿನ ಬೆಳೆಗಳ ಬಗ್ಗೆ ಕಂದಾಯ ಇಲಾಖೆಗೆ ಮಾಹಿತಿ ನೀಡುವಂತಹ ಯೋಜನೆ ರೂಪಿಸಲಾಗಿದೆ. ರೈತರು ತಮ್ಮ ನೆಲದಲ್ಲಿ ಬೆಳೆದ ಬೆಳೆ ಹಾನಿಯಾಗಿರುವುದಕ್ಕೆ ಸಂಬಂಧಿಸಿದಂತೆ ಬೆಳೆ ಮುಂದೆ ನಿಂತು ತಾವೇ ಫೋಟೋ ತೆಗೆದು, ಸರ್ಕಾರ (3ನೇ ಪುಟಕ್ಕೆ)

## ಪುಣ್ಯಸ್ಮರಣೆ



**ದಿ|| ಡಿ. ಕೊಟ್ರಪ್ಪ**
ನಿವೃತ್ತ ಫಾರ್ಮಾಸಿಸ್ಟ್
ಜನನ : 18 ಏಪ್ರಿಲ್ 1947,
ಮರಣ : 21 ಜುಲೈ 2020

ನೀವು ಲಿಂಗೈಕ್ಯರಾಗಿ
ಇಂದಿಗೆ ಒಂದು ತಿಂಗಳು...
ತಮ್ಮ ಸದಾಶಯದ ಹಾದಿಯಲ್ಲಿ
ನಡೆಯುವ ಸಂಕಲ್ಪದಲ್ಲಿ...

**ಶ್ರೀಮತಿ ಎಸ್. ಲೀಲಾ,** ನಿವೃತ್ತ ಮುಖ್ಯ ಶಿಕ್ಷಕರು
**ಶ್ರೀಮತಿ ಸೌಮ್ಯ ಶ್ರೀ ಕೆ. ಗಣೇಶ್,** ಸಹಾಯಕ ಪ್ರಾಧ್ಯಾಪಕರು
ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗ, ಬಿಐಇಟಿ, ದಾವಣಗೆರೆ.
**ಶ್ರೀಮತಿ ವಿನುತ ಕೆ. ಶ್ರೀ ರವಿಶೇಖರ್,** ಸಿವಿಲ್ ಎಂಜಿನಿಯರ್
**ಶ್ರೀಮತಿ ಮಮತ ಶ್ರೀ ವಿ. ನಟರಾಜ್,** ಗಣಿತ ಉಪನ್ಯಾಸಕರು,
ಸಿದ್ದಗಂಗಾ, ಪ.ಪೂ. ಕಾಲೇಜ್, ದಾವಣಗೆರೆ.
ಮೊಮ್ಮಕ್ಕಳಾದ : ಚಿ|| ವೃಷಾಂಕ್, ಚಿ|| ಚಂದ್ರಚೂಡ ಹಾಗೂ ಚಿ|| ಪ್ರಮಥ್
ಫೋ. : 96206 59856, 99646 36212

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.08.2020ರಂದು ನಿಧನರಾದ
ಗಣೇಶ ಶಾಮಿಯಾನ ಮಾಲೀಕರೂ, ನಮ್ಮ ಆತ್ಮೀಯ ಮಿತ್ರರಾದ

**ಆನೆಕೊಂಡ ಶ್ರೀ ಜಿ.ಡಿ. ದೇವರಾಜ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಶಿವಕುಮಾರ್ ಬಿ.ಹೆಚ್.
- ಜೆ. ಈಶ್ವರ್‌ಸಿಂಗ್ ಕವಿತಾಳ
- ಸೋಮಶೇಖರ್ ಬಾಬು ಆರ್.
- ಮುರಳೀಧರ್ ಗುಪ್ತ
- ರಮೇಶ್ ಕೆ. ಹೆಚ್.
- ಮಂಜುನಾಥ್ ಡಿ.
- ರಾಜರಾವ್ ಜಿ. ಎಸ್. ವಕೀಲರು
- ದಿಗ್ವಿಜಯ್ ಹತ್ತಿ
- ನಿರಂಜನ್ ಮೂರ್ತಿ ಬಿ. ಎಂ.
- ವಿಜಯಕುಮಾರ್ ಬಾಳೆಹೊಲ
- ಎಂ. ಎನ್. ಪ್ರಕಾಶ್ (ಬಾಬು)
- ಅರುಣ್‌ಕುಮಾರ್ ಟಿ. ಜಿ.
- ಮಹಾಲಿಂಗೇಶ್ ಎಸ್. ಎಂ.
- ಥಾಮಸ್ ಸಿ.
- ಬಸವರಾಜ್ ನೀಲಿ
- ಪ್ರಕಾಶ್ ಅಧಿಕಾರಿ
- ಮಲ್ಲಿಕಾರ್ಜುನ ಕಂಬಳಿ
- ರವಿಕುಮಾರ್ ಪಲ್ಲಾಗಟ್ಟೆ
- ಚಂದ್ರಶೇಖರ್ ಐನಹಳ್ಳಿ
- ನಾಗರಾಜ್ ಬಿ. ಆರ್.
- ಕರಬಸಪ್ಪ ಒಣರೊಟ್ಟಿ
- ಸಂಗಮೇಶ್ ಹಿರೇಗೌಡರ್
- ಪಿ. ಸಿ. ರಾಮನಾಥ್
- ಮಂಜುನಾಥ್ ಗಡಿಗುಡಾಳ್
- ಆರ್. ಎಚ್. ನಾಗಭೂಷಣ್
- ಡಾ. ರಮೇಶ್
- ಡಾ. ಬಿ.ಹೆಚ್. ಮಂಜುನಾಥ್
- ಡಾ. ದೇವೇಂದ್ರಪ್ಪ ಕೆ.ಸಿ.
- ಡಾ. ಪ್ರವೀಣ್ ಅಂಬರ್‌ಕರ್
- ಡಾ. ರುದ್ರೇಶ್
- ಆರ್. ಜಿ. ಬದರಿನಾಥ್
- ಶಶಾಂಕ್ ಜಿ.ಎಂ.
- ತಿಪ್ಪಣ್ಣ
- ಹೊನ್ನೂರು ಪ್ರಕಾಶ್
- ರಾಜು ರೆಡ್ಡಿ
- ಬಸವರಾಜ್ ಆಲೂರು
- ಅರುಣ್ ಬಿ. ವಿನಾಯಕ ಸ್ಟುಡಿಯೋ
- ರಾಜು ಜಿ ವಿ
- ರಾಮನಾಥ್ ಖಮಿತ್ಕರ್
- ಸುರೇಶ್ ಶಾಸ್ತ್ರಿ
- ಮರುಳಸಿದ್ದಪ್ಪ
- ಕೆ.ಜಿ. ಶಾಂತರಾಜ್ ಕಕ್ಕರಗೊಳ್ಳ ಗೌಡ್ರು
- ಕಾರ್ತಿಕ್ ಆರ್. ವಿ.
- ಶ್ರೀನಿವಾಸ್, (ಕೋಕಿ ಮ್ಯಾಕ್)
- ಎನ್. ಕೆ. ಉಮಾಪತಿ (ಗಂಗನಕಟ್ಟೆ)
- ಬೆಳ್ಳೂಡಿ ಶಿವಕುಮಾರ್
- ಶ್ರೀಕಾಂತ್ (ಎಲ್.ಎಫ್.ಎಂ.)

**ಕುಂದುವಾಡ ಕೆರೆ ವಾಯು ವಿಹಾರ ಬಳಗ ಮತ್ತು ಟೀ ಲಾಂಚ್ ಗೆಳೆಯರ ಬಳಗ**

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಮನೆ ಬಾಡಿಗೆಗೆ/ಲೀಜ್‌ಗೆ**
1 BHK, 2 BHK, 3 BHK
ರುದ್ರೇಶ್, ಏಜೆಂಟರು
87226 08529

**ಹೊಸ, ಹೊಸ, ಮನೆಗಳು ಮಾರಾಟಕ್ಕೆ**
30X40, west, ಜಯನಗರ, 30X50, west, ಹೈಟೆಕ್ ಲೇಔಟ್‌ನಲ್ಲಿ 40X60, East, 3 ಬೆಡ್ ರೂಂ ನ್ಯೂ.
ಐನಳ್ಳಿ ಚನ್ನಬಸಪ್ಪ, ಏಜೆಂಟ್.
99166 12110 93410 14130

**ಬಾಡಿಗೆಗೆ ಬೇಕಾಗಿದೆ**
ಹಾಸ್ಟೆಲ್ / ಪಿ.ಜಿ. ಮಾಡಲು ಮನೆ ಅಥವಾ ಹಾಸ್ಟೆಲ್ / ಪಿ.ಜಿ. ಬೇಕಾಗಿದೆ.
ಆಸಕ್ತಿಯುಳ್ಳವರು ಸಂಪರ್ಕಿಸಿ:
97402 58276

**ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ. 99020-05004

**ಜಾಗ ಕೊಳ್ಳಲು ಬೇಕಾಗಿರುತ್ತದೆ.**
ಶರ್ಮ:
74112 50447

**ಬೇಕಾಗಿದ್ದಾರೆ**
ಬೇಕರಿ ಕೌಂಟರ್‌ನಲ್ಲಿ ಕೆಲಸ ಮಾಡಲು ಮೂವರು ಯುವಕರು ಹಾಗೂ ಇಬ್ಬರು ಸಹಾಯಕರ ಕೆಲಸಕ್ಕಾಗಿ ಬೇಕಾಗಿದ್ದಾರೆ.
96323 40021
80883 45070

**ಸೈಟ್‌ಗಳು ಮಾರಾಟಕ್ಕೆ**
30X50, west, 80 ಅಡಿ ರೋಡಿಗೆ ಹತ್ತಿರ, ಜಯನಗರದಲ್ಲಿ 40x60, West, 40x60, North
ಐನಳ್ಳಿ ಚನ್ನಬಸಪ್ಪ, ಏಜೆಂಟ್.
93410 14130, 99166 12110

**ಖಾಲಿ ಸೈಟ್ ಮಾರಾಟಕ್ಕಿದೆ**
ಹರಿಹರ ನಗರದ ಹರಪನಹಳ್ಳಿ. ರಸ್ತೆಯ ಇಂಡಸ್ಟ್ರಿಯಲ್ ಎಸ್ಟೇಟ್‌ನ ಎನ್.ಟಿ.ಭೂತೆ ಲೇಔಟ್ ನಲ್ಲಿರುವ ಉತ್ತರ ಮುಖವಾಗಿರುವ 40x75 ಅಳತೆವುಳ್ಳ ಸೈಟ್ ನಂಬರ್ 27 ಇರುವ ಖಾಲಿ ನಿವೇಶನ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿರಿ :
99868 82386, 99019 92315

**WANTED**
PUC, Any Degree with Basic computer Knowledge is Must and Tele caller, For Male & Female, Service Engineers - 4
SAMSUNG SERVICE CENTER
# 2137/1, 4th Main, 3rd cross MCC 'A' Block, Davanagere.
98865 15100

**ಕೆಲಸಕ್ಕೆ ಬೇಕಾಗಿದ್ದಾರೆ**
ರೆಡಿ ಆಟೋಮೊಬೈಲ್ಸ್‌ಗೆ ಅನುಭವವುಳ್ಳ ಟ್ಯಾಲಿ ಆಪರೇಟರ್ಸ್ ಬೇಕಾಗಿದ್ದಾರೆ.
(FeMale only)
90352 20050

**ಬೇಕಾಗಿದ್ದಾರೆ**
ಕಂಪ್ಯೂಟರ್ ಟ್ಯಾಲಿ ಆಗಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ಹದಡಿ ರೋಡ್, ದಾವಣಗೆರೆ.
94807 67064
99642 12379

**ಹೊಸ ಮನೆ ಮಾರಾಟಕ್ಕಿದೆ**
30x 35, ದಕ್ಷಿಣ ದಿಕ್ಕು ಎಸ್.ಎಸ್. ಆಸ್ಪತ್ರೆ ಹಿಂಭಾಗ, ಗಣಪತಿ ನಗರ. ಸಂಪರ್ಕಿಸಿರಿ:
ಜಿ. ಭಾಸ್ಕರ್ ರೆಡ್ಡಿ
94489 23785
95359 67499

**ತಕ್ಷಣ ಬೇಕಾಗಿದ್ದಾರೆ**
ಅಡುಗೆ ಭಟ್ಟರು -1- 8000/-
ಸಹಾಯಕರು -1- 5000/-
ಸಮಯ ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ
ಸಂಪರ್ಕಿಸಿ :
97312 03956

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ವಿಳಾಸ: ಸುಬ್ರಮಣ್ಯ ಅಗ್ರೋ ಟೆಕ್ ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ: 94484 39639
63665 96479

**ಮಾರಾಟಕ್ಕೆ**
ದೇವರಾಜ್ ಅರಸ್ ಬಡಾವಣೆಯಲ್ಲಿ 30X40 (ಪಶ್ಚಿಮ) ಸೈಟ್, ಎಸ್.ಎಸ್.ಲೇಔಟ್‌ನಲ್ಲಿ 30X40 (ಪೂರ್ವ) 3 ಫ್ಲೋರ್ ಮನೆ, ಬಸವೇಶ್ವರ ಲೇಔಟ್‌ನಲ್ಲಿ 30X50 (ಪಶ್ಚಿಮ) ಮನೆ, ಸರಸ್ವತಿ ಬಡಾವಣೆಯಲ್ಲಿ 20X30 (ಪಶ್ಚಿಮ) ಮನೆ ಮಾರಾಟಕ್ಕೆ ಇವೆ.
98804 40602

**ರೂಂ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ, BSNL ಆಫೀಸ್‌ಗೆ ಹತ್ತಿರ, ಎಲ್ಲಾ ಸೌಕರ್ಯವುಳ್ಳ ದೇವರಾಜ ಅರಸು ಬಡಾವಣೆ, ಎ ಬ್ಲಾಕ್, 5ನೇ ಕ್ರಾಸ್‌ನಲ್ಲಿ ಬಾಡಿಗೆಗೆ ಇದೆ.
ಫೋ. : 97310 63330

**3BHK ಪೂರ್ವ/ ಉತ್ತರ ಹೊಸಮನೆ ಬಾಡಿಗೆ/ಲೀಸ್‌ಗೆ ಬೇಕಾಗಿದೆ.**
98444 06587

**ಹುಡುಗರು ಬೇಕಾಗಿದ್ದಾರೆ**
10th or 12th Pass or Fail
ದುರ್ಗಾಶ್ರೀ ಟಿಂಬರ್ಸ್
ಆರ್.ಎಂ.ಸಿ ರೋಡ್ ದಾವಣಗೆರೆ
ಭೇಟಿಯ ಸಮಯ: ಬೆ.9 ರಿಂದ ಸಂಜೆ 6ರವರಗೆ
88844 45445
98442 10443

**JOB OPPORTUNITY**
Qualification : Diploma civil / BE Civil (Auto cad)
Place : Harihar
80731 80500


# ಸಂಘಟನೆ ನಿಷೇಧಕ್ಕೆ ಕಾನೂನು

**(1ನೇ ಪುಟದಿಂದ)** ಸಲ್ಲಿಸಲಾಗಿದೆ.

ಇಂತಹ ಸಂಘಟನೆಗಳನ್ನು ರಾಜ್ಯದಲ್ಲಿ ಬೇರು ಬಿಡಲು ಅವಕಾಶ ನೀಡಬಾರದು. ಆದರೆ ಅವುಗಳನ್ನು ನಿಷೇಧಿಸಲು ಅಗತ್ಯವಾದ ಸಾಕ್ಷ್ಯಾಧಾರಗಳು ಬೇಕಾಗಿವೆ.

ಇಂತಹ ಸಾಕ್ಷ್ಯಾಧಾರಗಳನ್ನು ಗೃಹ ಇಲಾಖೆ ಪತ್ತೆ ಹಚ್ಚಿ, ವರದಿ ಸಿದ್ಧಪಡಿಸುತ್ತಿದೆ. ಇದರ ಜೊತೆಗೆ ಕೇಂದ್ರದ ತನಿಖಾ ದಳದ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು, ಮುಂದಿನ ಸಂಪುಟ ಸಭೆ ವೇಳೆಗೆ ಕಾನೂನು ಸಿದ್ಧಪಡಿಸುವಂತೆ ಮುಖ್ಯಮಂತ್ರಿಯವರು ಗೃಹ ಮತ್ತು ಕಾನೂನು ಇಲಾಖೆಗೆ ಆದೇಶಿಸಿದರು.

ಇದಕ್ಕೂ ಮುನ್ನ ಸಚಿವರಾದ ಕೆ.ಎಸ್.ಈಶ್ವರಪ್ಪ, ಆರ್. ಅಶೋಕ್, ಸಿ.ಟಿ. ರವಿ, ಸೇರಿದಂತೆ ಕೆಲವು ಸಚಿವರು ನಾವು ಅಧಿಕಾರಕ್ಕೆ ಬಂದ ನಂತರ ಎಸ್‌ಡಿಪಿಐ, ರಾಜ್ಯದಲ್ಲಿ ಆಗಿಂದಾಗ್ಗೆ ಶಾಂತಿ ಕದಡುತ್ತಿವೆ ಎಂದು ಆರೋಪಿಸಿದರು.

ಅಷ್ಟೇ ಅಲ್ಲದೆ, ಕೋಮು ದಳ್ಳುರಿ, ಬೆಂಕಿ ಹಚ್ಚುವ ಕೆಲಸವೂ ನಡೆದಿದೆ. ಶಾಸಕರ ಮನೆಗೆ ಬೆಂಕಿ ಹಾಕುತ್ತಾರೆ ಎಂದರೆ ಇವರು ಮುಂದೆ ಯಾವುದೇ ಕೃತ್ಯವನ್ನು ಮಾಡಲೂ ಹಿಂಜರಿಯುವುದಿಲ್ಲ.

ಸರ್ಕಾರ ಪದೇ ಪದೇ ಎಚ್ಚರಿಕೆ ನೀಡಿದರೂ, ಸಣ್ಣ ಕಾರಣಗಳನ್ನು ಮುಂದಿಟ್ಟು ಕೊಂಡು, ಕಾನೂನು ಸುವ್ಯವಸ್ಥೆ ಹದಗೆಡಿಸು ತ್ತಿದ್ದಾರೆ ಎಂದು ತಿಳಿಸಿದರು. ಕೆಲವರು ಎಲ್ಲಿಯೇ ಕುಳಿತುಕೊಂಡು ರಾಜ್ಯದಲ್ಲಿ ಸಂಘಟನೆ ಬಲಪಡಿಸುವ ಕಾರ್ಯ ಮಾಡುತ್ತಿದ್ದಾರೆ. ಇದಕ್ಕೆ ಇತಿಶ್ರೀ ಹಾಡಲೇಬೇಕೆಂದು ಆಗ್ರಹಿಸಿದರು.

# ಕೊನೆ ಸಾಲಿನಲ್ಲಿ ದಾವಣಗೆರೆ

**(1ನೇ ಪುಟದಿಂದ)** ಪಡೆದಿತ್ತು. 2018ರಲ್ಲಿ ನಗರವು 213ನೇ ಸ್ಥಾನದಲ್ಲಿತ್ತು. ಜನರಿಂದ ಅಭಿಪ್ರಾಯ ಸಂಗ್ರಹ, ನೇರ ಪರಿಶೀಲನೆ, ಸೇವೆಗಳಲ್ಲಿ ಆಗಿರುವ ಪ್ರಗತಿ ಹಾಗೂ ಪ್ರಮಾಣೀಕರಣ ಎಂಬ ನಾಲ್ಕು ಭಾಗಗಳ ಆಧರಿಸಿ ಸಮೀಕ್ಷೆ ನಡೆಸಲಾಗಿತ್ತು. ಪ್ರತಿ ಭಾಗಕ್ಕೆ ತಲಾ 1,500 ಅಂಕಗಳಂತೆ ಒಟ್ಟು 6,000 ಅಂಕಗಳನ್ನು ನಿಗದಿ ಪಡಿಸಲಾಗಿತ್ತು.

ಒಂದರಿಂದ ಹತ್ತು ಲಕ್ಷದೊಳಗಿನ ಜನಸಂಖ್ಯೆಗಳ ನಗರಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ದಾವಣಗೆರೆ 318ನೇ ಸ್ಥಾನದಲ್ಲಿದೆ. ಮೈಸೂರು ರಾಷ್ಟ್ರ ಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದೆ. ರಾಷ್ಟ್ರ ಮಟ್ಟದ ಸಮೀಕ್ಷೆಯಲ್ಲಿ ರಾಜ್ಯದ ಮೈಸೂರು ಹಾಗೂ ತುಮಕೂರುಗಳು ಮಾತ್ರ ಮೊದಲ 100 ನಗರಗಳ ಸಾಲಿನಲ್ಲಿ ಸ್ಥಾನ ಪಡೆದಿವೆ. ತುಮಕೂರು 48ನೇ ಸ್ಥಾನದಲ್ಲಿದೆ.

# ಕೊನೆಯಿಂದ 2ನೇ ಸ್ಥಾನ

**(1ನೇ ಪುಟದಿಂದ)**

**ಸ್ಥಾನದಲ್ಲಿರುವ ಬಿಹಾರ 760.40 ಅಂಕ ಪಡೆದಿದೆ. 100ಕ್ಕೂ ಕಡಿಮೆ ನಗರ ಸ್ಥಳೀಯ ಸಂಸ್ಥೆಗಳಿರುವ ರಾಜ್ಯಗಳ ಪಟ್ಟಿಯಲ್ಲಿ ಜಾರ್ಖಂಡ್ ಮೊದಲ ಸ್ಥಾನದಲ್ಲಿದೆ. ನಂತರ ಸ್ಥಾನಗಳಲ್ಲಿ ಹರಿಯಾಣ ಹಾಗೂ ಉತ್ತರಾಖಂಡಗಳಿವೆ.**

# 24ರಂದು ಶಾಸಕ ರಾಮಚಂದ್ರರಿಗೆ ಅಭಿನಂದನೆ

ಜಗಳೂರು, ಆ.20 - ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾಗಿ ನೇಮಕವಾಗಿರುವ ಶಾಸಕ ಎಸ್.ವಿ. ರಾಮಚಂದ್ರ ಅವರಿಗೆ ಇದೇ ದಿನಾಂಕ 24ರ ಸೋಮವಾರ ಮಧ್ಯಾಹ್ನ 12 ಕ್ಕೆ ಅಭಿನಂದನಾ ಸಮಾರಂಭ ನಡೆಯಲಿದೆ.

ಈ ಸಂಬಂಧ ಇಂದಿಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಅಧ್ಯಕ್ಷ ಪಲ್ಲಾಗಟ್ಟೆ ಮಹೇಶ್ ತಿಳಿಸಿದ್ದಾರೆ.

ಪಟ್ಟಣದ ಶ್ರೀ ಮಹರ್ಷಿ ವಾಲ್ಮೀಕಿ ಭವನದ ಮುಂದೆ ಇರುವ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಂತರ ಶ್ರೀ ತರಳಬಾಳು ಸಮುದಾಯ ಭವನದಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

ಸಾಮಾಜಿಕ ಅಂತರ ಕಾಪಾಡಿ, ಕೊರೊನಾ ತೊಲಗಿಸಿ


**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6.4 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಆಫೀಸ್/ಕ್ಲಿನಿಕ್‌ಗೆ ಮಳಿಗೆ ಬಾಡಿಗೆಗಿದೆ**
(550Sqft) ಗ್ರೌಂಡ್ ಫ್ಲೋರ್ 2608/2, 2ನೇ ಮೇನ್, ಚರ್ಚ್ ರೋಡ್,ಎಂ.ಸಿ.ಸಿ. 'ಎ' ಬ್ಲಾಕ್, ಸೂಪರ್ ಮಾರ್ಕೆಟ್ ಹತ್ತಿರ, ದಾವಣಗೆರೆ.
99012 16456
90089 00405

**ಬೇಕಾಗಿದ್ದಾರೆ**
ಕೃಷಿ ಯಂತ್ರಗಳ ಸೇಲ್ಸ್ ಮೆನ್ ಬೇಕಾಗಿದ್ದಾರೆ.
Qualification : PUC or Graduate
Experince : Minum 2 years
Contact :
91080 10190

**KHB ಹರಿಹರ ಸೈಟು ಮಾರಾಟಕ್ಕಿದೆ**
30/50, ಪೂರ್ವ
@ Rs 1700/Sqft
74112 50447

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**WORK FROM HOME**
ಆಸಕ್ತಿಯುಳ್ಳವರಿಗೆ ಸದಾವಕಾಶ
74118 89988

**ಮಾರಾಟಕ್ಕೆ**
ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಅಶೋಕನಗರ ಮನೆ -20×40, ನಿಟುವಳ್ಳಿ ಹೊಸ ಬಡಾವಣೆಯ ಮನೆಗಳು, 15×42, 30×42 15×42, KHB ಸೈಟ್ 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40 30×42, (ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
7899636597 9916525828


## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಸತ್ಯವಾನ್ ಎಂ. ಆರ್.**
ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿದ್ದು, ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಪತ್ನಿ : **ಸರೋಜ ಎಂ. ಎಸ್** ಮತ್ತು ಮಕ್ಕಳು. ದಾವಣಗೆರೆ.

## ಶ್ರೀಮತಿ ತಿಮ್ಮಕ್ಕ ನಿಧನ



ದಾವಣಗೆರೆ ಜಾಲಿನಗರ, 2ನೇ ಮೇನ್, 1ನೇ ಕ್ರಾಸ್ ವಾಸಿ ದಿ.ಭಜಂತ್ರಿ, ಎ.ಎಂ ತಿರುಪತಯ್ಯ ಇವರ ಧರ್ಮಪತ್ನಿ ಶ್ರೀಮತಿ ತಿಮ್ಮಕ್ಕ (78) ಅವರು ದಿನಾಂಕ 20.08.2020ರಂದು ಗುರುವಾರ ರಾತ್ರಿ 9.30ಕ್ಕೆ ನಿಧನರಾಗಿದ್ದಾರೆ. ಆರು ಜನ ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.8.2020ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಎಸ್.ಆರ್ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ ದಿ. ಸಣ್ಣ ರೇವಪ್ಪರ ಎಸ್. ಆರ್ ರೇವಣ್ಣಸಿದ್ದಪ್ಪನವರ ಪುತ್ರ ಎಸ್. ಆರ್. ಬಸವರಾಜಪ್ಪ (55) ಅವರು ದಿನಾಂಕ 20.08.2020ರ ಗುರುವಾರ ಮಧ್ಯಾಹ್ನ 12.40ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.8.2020ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹಿರೇತೊಗಲೇರಿ ಗ್ರಾಮದಲ್ಲಿ ನೆರವೇರಲಿದೆ.

## ಹಾಲೇಶಪ್ಪ ನಿಧನ



ದಾವಣಗೆರೆಯ ದುಗ್ಗಮ್ಮನ ಪೇಟೆ ವಾಸಿ, ಹೂವಿನ ವ್ಯಾಪಾರಿ ಹಾಲೇಶಪ್ಪ (58) ಅವರು ದಿನಾಂಕ 20.08.2020 ರಂದು ಗುರುವಾರ ಮಧ್ಯಾಹ್ನ 3.30 ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.8.2020ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಎಸ್.ಎಸ್. ಆಸ್ಪತ್ರೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.08.2020ರಂದು ನಿಧನರಾದ ಗಣೇಶ ಶಾಮಿಯಾನ ಮಾಲೀಕರೂ, ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ನಿರ್ದೇಶಕರಾದ
**ಶ್ರೀ ಜಿ.ಡಿ. ದೇವರಾಜ್ ಆನೆಕೊಂಡ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ದೇವರಮನಿ ಶಿವಕುಮಾರ್, ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಸರ್ವ ಸದಸ್ಯರು**
**ಜಿಲ್ಲಾ ಅಖಿಲ ಭಾರತ ವೀರಶೈವ ಮಹಾಸಭಾ, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20-08-2020ರ ಗುರುವಾರ ನಿಧನರಾದ ದಾವಣಗೆರೆ ಸಿದ್ದರಾಮೇಶ್ವರ ಬಡಾವಣೆ ವಾಸಿ, ಸವಿತಾ ಕ್ರೆಡಿಟ್ ಕೋ.ಆಪ್ ಸೊಸೈಟಿಯ ನಿರ್ದೇಶಕರಾದ **ಎಂ.ವಿ.ಹರೀಶ್** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ **ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ,** ಸಿದ್ದಲಿಂಗೇಶ್ವರ ನಗರ, ದಾವಣಗೆರೆ.

||ಶ್ರೀ ತುಳಜಾ ಭವಾನಿ ಪ್ರಸನ್ನ || || ಶ್ರೀ ಸೇವಾಲಾಲ್ ಮರಿಯಮ್ಮ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ



ಚಳ್ಳಕೆರೆ ತಾಲ್ಲೂಕು ಮನಮೈನಹಟ್ಟಿ ಗ್ರಾಮದ ವಾಸಿ
**ಶ್ರೀಮತಿ ಸೀತಾಬಾಯಿ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 11.08.2020ನೇ ಮಂಗಳವಾರ ಬೆಳಿಗ್ಗೆ 8.20ಕ್ಕೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ಎಸ್. ಶಂಕರನಾಯ್ಕ್**
ನಿವೃತ್ತ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿ. : 23.08.2020ನೇ ಭಾನುವಾರ, ಬೆಳಿಗ್ಗೆ 9.00 ರಿಂದ 10.30 ರವರೆಗೆ ಸ್ವಗೃಹ, ಮನಮೈನಹಟ್ಟಿ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಸೀತಾಬಾಯಿ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು, ಫೋ. : 761936557

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.08.2020ರಂದು ನಿಧನರಾದ ಗಣೇಶ ಶಾಮಿಯಾನ ಮಾಲೀಕರೂ, ನಮ್ಮ ಆತ್ಮೀಯರಾದ
**ಶ್ರೀ ಜಿ.ಡಿ. ದೇವರಾಜ್ ಆನೆಕೊಂಡ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಕೆ.ಜಿ. ಶಾಂತರಾಜ್ ಕಕ್ಕರಗೊಳ್ಳ
✦ ಅರುಣ್‌ಕುಮಾರ್ ತರಗನಹಳ್ಳಿ
✦ ಬಾಳೆಹೊಲದ ವಿಜಯಕುಮಾರ್
✦ ಮರುಳಸಿದ್ದಪ್ಪ
✦ ಎಂ.ಎನ್. ಪ್ರಕಾಶ್ (ದುಬೈ ಬಾಬು)

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 6.8.2020ರಂದು ನಿಧನರಾದ ಚೌಕಿಪೇಟೆಯ ಶ್ರೀ ಕೊಟ್ಟೂರೇಶ್ವರ ಜ್ಯೂಯಲರಿ ಮಾರ್ಟ್ ಮಾಲೀಕರಾದ
**ಶ್ರೀ ಅನಂತ್ ವೀರಪ್ಪ ಕುರ್ಡೇಕರ್**
*ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.*
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಸತ್ಯನಾರಾಯಣ ಆರ್. ರಾಯ್ಕರ್**
**ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು**
**ದೈವಜ್ಞ ಬ್ರಾಹ್ಮಣ ಸಮಾಜ ಸಂಘ, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20-08-2020ರಂದು ನಿಧನರಾದ ತುರ್ಚಘಟ್ಟ ಶ್ರೀ ರಾಘವೇಂದ್ರ ಟ್ರೇಡರ್ಸ್ ಮಾಲೀಕರಾಗಿದ್ದ ಶ್ರೀ ಬಿ.ತಿಪ್ಪಣ್ಣ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ **ಡಿ.ದೇವಂದ್ರಪ್ಪ ,** ಅನ್ನಪೂರ್ಣ ಟ್ರೇಡಿಂಗ್ ಕಂಪನಿ, ಹೊನ್ನಮರಡಿ.
✦ **ಎ.ಹೆಚ್. ಸತೀಶ್,** ಕಲ್ಪತರು ಟ್ರೇಡರ್ಸ್, ಕುಕ್ಕವಾಡ.
✦ **ಮಹಾಲಿಂಗರಾಜ ಬಿ ಹುಲಗೂರ,** ನಿಚಿನೋ ಇಂಡಿಯಾ ಪ್ರೈ. ಲಿ. ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



**ಹೆಚ್.ಎನ್. ರಂಗನಾಥ್**
*ಜಯ್ ಮ್ಯೂಸಿಕ್ (ನಿಧನ - ದಿನಾಂಕ : 20.08.2020)*
ಸಿನಿಮಾ ಸಿರಿ ಸದಸ್ಯರು, ಲಯನ್ಸ್ ಕ್ಲಬ್ ಸದಸ್ಯರು, ಸ್ಮಾರ್ಟ್ ಸರ್ಕಲ್ ಸದಸ್ಯರು, ಹ್ಯಾಪಿ ಫ್ರೆಂಡ್ಸ್ ಕ್ಲಬ್‌ನ ಸದಸ್ಯರು, ವಾಕಿಂಗ್ ಫ್ರೆಂಡ್ಸ್‌ನ ಸದಸ್ಯರು ಹೀಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದ
**ಸರಳ ವ್ಯಕ್ತಿತ್ವ, ಸ್ನೇಹಜೀವಿ, ಸದಾ ಹಸನ್ಮುಖಿ, ಅಜಾತ ಶತ್ರು, ರಂಗಣ್ಣನವರ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ.**

✦ ಡಾ. ನಾಗಪ್ರಕಾಶ್ ✦ ಜಿ. ನಾಗನೂರ್ ✦ ಮದನ್‌ಕುಮಾರ್ ✦ ಎಸ್.ಕೆ. ಶಿವಕುಮಾರ್
✦ ಸುರಭಿ ಶಿವಮೂರ್ತಿ ✦ ಹೆಚ್.ವಿ. ಮಂಜುನಾಥಸ್ವಾಮಿ ✦ ಎನ್.ವಿ. ಬಂಡಿವಾಡ್ ✦ ಜಂಬಿಗಿ ರಾಧೇಶ್
✦ ಆರ್.ಟಿ. ಮೃತ್ಯುಂಜಯ ✦ ಎ.ಬಿ. ಪ್ರತಾಪ್ ✦ ರವಿಶಂಕರ್ ವಾಲಿ ✦ ಟಿ.ಎಂ. ಪಂಚಾಕ್ಷರಯ್ಯ
✦ ಎಂ.ವಿ.ವಿ. ಸತ್ಯನಾರಾಯಣ ✦ ಎನ್.ಸಿ. ಬಸವರಾಜ ✦ ಈಶ್ವರಿ ಶಿವಕುಮಾರ್
✦ ಗಾಂಧಿ ಮ್ಯೂಸಿಕ್ ಮಲ್ಲಿಕಾರ್ಜುನ್ ✦ ಮಂಜುನಾಥ ಸಿ. ✦ ಜಗದೀಶ್ ಎಂ.ಜಿ. ✦ ಎಂ. ಉಮಾಪತಯ್ಯ
✦ ಸಂತೋಷಕುಮಾರ್ ಬಿ. ✦ ಕಂಬ್ಳಿ ಹಾಲಸ್ವಾಮಿ ✦ ಇ.ಎಂ. ಮಂಜುನಾಥ

|| ಶಿವ ||

## ಪ್ರಥಮ ಪುಣ್ಯಸ್ಮರಣೆ



**ಲಿಂ. ಶ್ರೀಮತಿ ಲಿಂದಮ್ಮ**
*(ನಿಧನ : 01.09.2019)*
ನೀವು ಶಿವೈಕ್ಯರಾಗಿ ಒಂದು ವರ್ಷವಾಯಿತು.
ಸದಾ ನಿಮ್ಮ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ,
ಪತಿ : ಶ್ರೀ ಹೆಚ್. ರಾಮಚಂದ್ರಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು
ಪುತ್ರ : ಆರ್. ರಾಘವೇಂದ್ರ, ಆರೋಗ್ಯ ಇಲಾಖೆ, ದಾವಣಗೆರೆ.
ಮಕ್ಕಳು : ಶ್ರೀಮತಿ ಆರ್. ರೇಖಾ ಜೆ.ಎನ್. ಬಲ್ಲೂರು.
B.E. Civil ಇಂಜಿನಿಯರ್, ರಾಣೇಬೆನ್ನೂರು
ಶ್ರೀಮತಿ ಆರ್.ನಾಗಮ್ಮ ಕೃಷ್ಣರಾವ್, ಪೊಲೀಸ್ ಇಲಾಖೆ, ರಾಣೇಬೆನ್ನೂರು
ಶ್ರೀಮತಿ ಆರ್.ಶಾಂತ, ಎನ್.ಬಿ. ನಾಗರಾಜ್ ಗೌಡ, ಹೂವಿನ ಹಡಗಲಿ.
ಶ್ರೀಮತಿ ಆರ್.ಸುಧಾ ಶಂಕರ್ ಅರಿಶಿನಗೋಡಿ, ಧಾರವಾಡ.
ಸೊಸೆ : ಶ್ರೀಮತಿ ಅನುಷ ಆರ್. ರಾಘವೇಂದ್ರ
ಅಣ್ಣ ಹಾಗೂ ಮೊಮ್ಮಕ್ಕಳು.


# 818/3, 'ಶಿವ ನಿಲಯ' ಕುವೆಂಪು 'ಎ' ಮುಖ್ಯ ರಸ್ತೆ, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, 2ನೇ ಹಂತ, ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ.
ಮೊ: 98445 72309, 87923 78744


**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20-08-2020ರ ಗುರುವಾರ ನಿಧನರಾದ ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಿರ್ದೇಶಕರಾದ
**ಶ್ರೀ ಎಂ.ವಿ. ಹರೀಶ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಎನ್. ರಂಗಸ್ವಾಮಿ,** ವಕೀಲರು, ಅಧ್ಯಕ್ಷರು — **ಶ್ರೀ ಜಿ.ಸಿ. ಶ್ರೀನಿವಾಸ್,** ಉಪಾಧ್ಯಕ್ಷರು

**ಶ್ರೀ ಸಿ. ರಾಮಾಂಜನೇಯ,** ನಿರ್ದೇಶಕರು, ಮಾಜಿ ಉಪಾಧ್ಯಕ್ಷರು — **ಶ್ರೀ ಜೆ. ಮಂಜುನಾಥ್** ಸಿವಿಲ್ ಇಂಜಿನಿಯರ್ ನಿರ್ದೇಶಕರು — **ಶ್ರೀ ಎಂ. ಸೋಮಶೇಖರಪ್ಪ** ನಿರ್ದೇಶಕರು

**ಶ್ರೀ ಎನ್. ಗೋವಿಂದರಾಜು** ನಿರ್ದೇಶಕರು — **ಶ್ರೀ ವಿ.ಎಸ್. ಕೇಶವಮೂರ್ತಿ** ನಿರ್ದೇಶಕರು — **ಶ್ರೀಮತಿ ಸುವರ್ಣ ಗಂಗಾಧರ** ನಿರ್ದೇಶಕರು — **ಶ್ರೀಮತಿ ಶೋಭಾ ಸುರೇಶ್** ನಿರ್ದೇಶಕರು

**ಶ್ರೀ ಜಿ. ಶ್ರೀನಿವಾಸ್** ವಿಶೇಷ ಆಹ್ವಾನಿತರು — **ಶ್ರೀ ಡಿ. ವೆಂಕಟೇಶ್ ನಾಯ್ಕ** ಕಾರ್ಯದರ್ಶಿ

ಸಿಬ್ಬಂದಿ ವರ್ಗ :
✦ ಪರಶುರಾಮ್ ಜಿ.ಎಸ್. ✦ ಕರಿಬಸಪ್ಪ ಆರ್. ✦ ರಾಘವೇಂದ್ರ ಸಿ. ✦ ರಾಮಚಂದ್ರಪ್ಪ ಎನ್.
✦ ಯಶವಂತ ರಾಜ್ ಆರ್. ಹಾಗೂ ಪಿಗ್ಮಿ ಹಾಗೂ ಸಾಲ ಸಂಗ್ರಹಕಾರರು

**ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ಎಸ್. ವರದರಾಜ್ ಕಾಂಪ್ಲೆಕ್ಸ್, ಬಾಪೂಜಿ ಆಸ್ಪತ್ರೆ ರಸ್ತೆ, ದಾವಣಗೆರೆ. ದೂ : 08192 -271329

ವಿ.ಸೂ. : ಶ್ರೀ ಎಂ.ವಿ. ಹರೀಶ್ ಅವರ ನಿಧನದ ಪ್ರಯುಕ್ತ ಸೊಸೈಟಿಗೆ ರಜೆ ಘೋಷಿಸಲಾಗಿದೆ.

# 17 ವ್ಯಕ್ತಿಗಳಿಗೆ ಸೋಂಕು ದೃಢ : ತಹಶೀಲ್ದಾರ್

**ಹರಿಹರ**

ಹರಿಹರ, ಆ.20- ನಗರದ ಹರ್ಲಾಪುರ 3, ಬೆಂಕಿನಗರ ಬಡಾವಣೆಯಲ್ಲಿ 2 ಸೇರಿ ಒಟ್ಟು 5 ವ್ಯಕ್ತಿಗಳಿಗೆ ಸೇರಿದಂತೆ ತಾಲ್ಲೂಕಿನ ಹೊಳೆಸಿರಿಗೆರೆ 1, ಬೆಳ್ಳೂಡಿ 2, ಮಲೇಬೆನ್ನೂರು 8, ಕೆ. ಬೇವಿನಹಳ್ಳಿ 1 ಸೇರಿದಂತೆ ಹರಿಹರ ತಾಲ್ಲೂಕಿನಲ್ಲಿ ಒಟ್ಟು 17 ವ್ಯಕ್ತಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ ಎಂದು ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ತಿಳಿಸಿದ್ದಾರೆ.

ನಗರದಲ್ಲಿ 532, ಗ್ರಾಮೀಣ ಪ್ರದೇಶದಲ್ಲಿ 317 ಸೇರಿ ಒಟ್ಟು 852 ವ್ಯಕ್ತಿಗಳಿಗೆ ಕೊರೊನಾ ಸೋಂಕು ಹರಡಿಕೊಂಡಿದ್ದು, 332 ವ್ಯಕ್ತಿಗಳು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿ ಮನೆಗೆ ತೆರಳಿದ್ದಾರೆ. ಹೋಂ ಐಸೋಲೇಷನ್‌ನಲ್ಲಿ 231, ದಾವಣಗೆರೆಯ ಸಿ.ಜಿ.ಆಸ್ಪತ್ರೆಯಲ್ಲಿ 142, ಕೋವಿಡ್ ಕೇರ್ ಸೆಂಟರ್‌ನಲ್ಲಿ 173, ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ 239 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಇಂದು 180 ವ್ಯಕ್ತಿಗಳಿಗೆ ಗಂಟಲು ದ್ರವ ಪರೀಕ್ಷೆ ಮಾಡಲಾಗಿದ್ದು, ಇಲ್ಲಿಯವರೆಗೆ 9548 ವ್ಯಕ್ತಿಗಳ ಗಂಟಲು ದ್ರವ ಪರೀಕ್ಷೆ ಮಾಡಲಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶ ಸೇರಿದಂತೆ ಇಲ್ಲಿಯವರೆಗೆ 285 ಕಂಟೈನ್‌ಮೆಂಟ್ ಝೋನ್‌ಗಳು ಇದ್ದು, ಅದರಲ್ಲಿ ಅವಧಿ ಮುಗಿದಿದ್ದು, 138 ಉಳಿದ 154 ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ವಾಸಿಸುವ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲಾ ರೀತಿಯ ಮುಂಜಾ ಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ವಿವರಿಸಿದ್ದಾರೆ.

# ರೈತರಿಂದಲೇ ಹಾನಿ ಸಮೀಕ್ಷೆ

**(1ನೇ ಪುಟದಿಂದ)** ಸಿದ್ದಪಡಿಸಿದ ಆಪ್‌ಗೆ ರೈತರೇ ಅಪ್‌ಲೋಡ್ ಮಾಡಬೇಕು. ರೈತರು ಮಾಹಿತಿ ನೀಡಲು ಈ ತಿಂಗಳ 26 ರವರೆಗೂ ಗಡುವು ನೀಡಲಾಗಿತ್ತು. ಇದೀಗ ಮತ್ತೆ ಒಂದು ತಿಂಗಳವರೆಗೂ ಸಮಯ ವಿಸ್ತರಣೆ ಮಾಡಲಾಗಿದೆ ಎಂದು ಸಚಿವ ಮಾಧುಸ್ವಾಮಿ ಹೇಳಿದ್ದಾರೆ.

ಈಗಾಗಲೇ ಐದು ಲಕ್ಷ ರೈತರು ಬೆಳೆ ನಷ್ಟದ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ. ಉಳಿದವರು, ತಮ್ಮ ಮಾಹಿತಿ ನೀಡಿದ ನಂತರ ಕೃಷಿ ಮತ್ತು ಕಂದಾಯ ಇಲಾಖೆ ರೂಪಿಸಿರುವ ನಿಯಮಾವಳಿಗಳ ಪ್ರಕಾರ ರೈತರಿಗೆ ಪರಿಹಾರ ದೊರೆಯಲಿದೆ ಎಂದರು.

ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯ ಹಾಗೂ ಆಶ್ರಮ ಶಾಲೆ ವಿದ್ಯಾರ್ಥಿಗಳಿಗೆ ಊಟೋಪಚಾರ, ಸೌಲಭ್ಯ, ಕಿಟ್ ಹಾಗೂ ಶೂ ಒದಗಿಸಲು 65.48 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ ಎಂದರು.

ರಾಜ್ಯಾದ್ಯಂತ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ಹಕ್ಕು ಪತ್ರಗಳನ್ನು ನೀಡಲು ಸಭೆ ತೀರ್ಮಾನಿಸಿದೆ. 1200 ಅಡಿ ಕೆಳಗಿರುವ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿರುವವರಿಗೆ ಸಕ್ರಮಗೊಳಿಸುವುದು. ಇಂತಹ ಸಂದರ್ಭದಲ್ಲಿ ಸಣ್ಣ ಪ್ರಮಾಣದಲ್ಲಿ ದಂಡ ವಿಧಿಸಿ, ಅವರಿಗೆ ವಾರಸುದಾರಿಕೆ ಹಕ್ಕುಪತ್ರಗಳನ್ನು ನೀಡಲು ಅನುಮತಿ ನೀಡಲಾಗಿದೆ.

ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದಿನ ಡಿಸೆಂಬರ್ ವರೆಗೆ ಮುಂದೂಡುವ ಘಟನೋತ್ತರ ಅನುಮೋದನೆಗೆ ಸಂಪುಟ ಒಪ್ಪಿಗೆ ನೀಡಿದೆ ಎಂದರು.

# ನಗರದಲ್ಲಿ ನಾಳೆ ಮಾಂಸ ಮಾರಾಟ ನಿಷೇಧ

ದಾವಣಗೆರೆ, ಆ.20- ಗಣೇಶ ಹಬ್ಬದ ಪ್ರಯುಕ್ತ ನಾಡಿದ್ದು ದಿನಾಂಕ 22 ರ ಶನಿವಾರ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಈ ದಿನಾಂಕದಂದು ಮಾಂಸ ಮಾರಾಟ ಮಾಡಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

# ಅಕ್ರಮ ಮರಳು ವಶ

ದಾವಣಗೆರೆ, ಆ.20- ಅಕ್ರಮವಾಗಿ ಮರಳು ಸಾಗಾಟದ ವೇಳೆ ದಾಳಿ ನಡೆಸಿರುವ ಪೊಲೀಸರು ಓರ್ವನನ್ನು ಬಂಧಿಸಿ ಲಾರಿ ಸಹಿತ 14 ಸಾವಿರ ಮೌಲ್ಯದ ಮರಳು ವಶಪಡಿಸಿಕೊಳ್ಳಲಾಗಿದೆ.

ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ಶಾಮನೂರು ಬಿಡ್ಜ್ ಹತ್ತಿರ ಟಿಪ್ಪರ್ ಲಾರಿಯಲ್ಲಿ ಅಕ್ರಮವಾಗಿ ಮರಳು ತುಂಬಿಕೊಂಡು ಸಾಗಿಸುತ್ತಿದ್ದಾಗ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಮುಸ್ತಾಕ್ ಅಹಮ್ಮದ್ ಹಾಗೂ ಸಿಬ್ಬಂದಿಗಳು ದಾಳಿ ಮಾಡಿದ್ದಾರೆ. ರವಿ ಬಂಧಿತನಾಗಿದ್ದು, ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ಮಲೇಬೆನ್ನೂರು ಹೋಬಳಿಯಲ್ಲಿ 207 ಜನರಿಗೆ ಟೆಸ್ಟ್ : 9 ಜನರಿಗೆ ಕೊರೊನಾ ಪಾಸಿಟಿವ್

ಮಲೇಬೆನ್ನೂರು, ಆ.20- ಹೋಬಳಿಯಲ್ಲಿ ಗುರುವಾರ 9 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿವೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

ಕುಂಬಳೂರಿನಲ್ಲಿ ಈಗಾಗಲೇ ಸೀಲ್‌ಡೌನ್ ಆಗಿರುವ ಏರಿಯಾದಲ್ಲಿ ನಾಲ್ವರು ಮಹಿಳೆಯರಿಗೆ ಹಾಗೂ ನಾಲ್ವರು ಪುರುಷರಿಗೆ ಮತ್ತು ಜಿಗಳಿಯಲ್ಲಿ 60 ವರ್ಷದ ವ್ಯಕ್ತಿಗೆ ಸೋಂಕು ತಗುಲಿದೆ.

207 ಟೆಸ್ಟ್ : ಗುರುವಾರ ಹಾಲಿವಾಣದಲ್ಲಿ 42, ಕೊಕ್ಕನೂರಿನಲ್ಲಿ 55, ಕಮಲಾಪುರದಲ್ಲಿ 34 ಮತ್ತು ನಿಟ್ಟೂರಿನಲ್ಲಿ 53 ಜನರಿಗೆ ಕೊರೊನಾ ರ್‍ಯಾಪಿಡ್ ಟೆಸ್ಟ್ ಮಾಡಲಾಗಿದೆ. ಕೊಕ್ಕನೂರಿನ ಪರೀಕ್ಷಾ ಕೇಂದ್ರಕ್ಕೆ ಟಿಹೆಚ್‌ಓ ಡಾ. ಚಂದ್ರಮೋಹನ್ ಭೇಟಿ ನೀಡಿದ್ದರು.

ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಖಾದರ್, ಹಿರಿಯ ಆರೋಗ್ಯ ಸಹಾಯಕ ಎಂ.ಉಮಣ್ಣ, ಪ್ರಯೋಗ ಶಾಲಾ ತಂತ್ರಜ್ಞರಾದ ಹೊನ್ನಪ್ಪ, ರಾಘು, ಆರೋಗ್ಯ ಸಿಬ್ಬಂದಿಗಳಾದ ಗೋವಿಂದಪ್ಪ, ರೂಪ ಮತ್ತು ಆಶಾ ಕಾರ್ಯಕರ್ತರು ಈ ವೇಳೆ ಹಾಜರಿದ್ದರು.


# ಜಿಲ್ಲೆಯಲ್ಲಿ 244 ಪಾಸಿಟಿವ್, 381 ಬಿಡುಗಡೆ

ದಾವಣಗೆರೆ, ಆ. 20- ಜಿಲ್ಲೆಯಲ್ಲಿ ಗುರುವಾರ 244 ಕೊರೊನಾ ಸೋಂಕು ದೃಢಪಟ್ಟ ಪ್ರಕರಣಗಳು ವರದಿಯಾಗಿವೆ. ಐವರು ಸಾವನ್ನಪ್ಪಿದ್ದು, 381 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿ ದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 244 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 133, ಹರಿಹರ 28, ಜಗಳೂರು 8, ಚನ್ನಗಿರಿ 39, ಹೊನ್ನಾಳಿ 32 ಹಾಗೂ ಹೊರ ಜಿಲ್ಲೆಯ 4 ಜನರಲ್ಲಿ ಸೋಂಕು ದೃಢಪಟ್ಟಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 236, ಹರಿಹರ 46, ಜಗಳೂರು 4, ಚನ್ನಗಿರಿ 35, ಹೊನ್ನಾಳಿ 43 ಹಾಗೂ ಹೊರ ಜಿಲ್ಲೆಯ 17 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿ ದ್ದಾರೆ. ದಾವಣಗೆರೆ ದೊಡ್ಡಬಾತಿಯ 67ರ ಮಹಿಳೆ, 43ರ ಪುರುಷ, 77ರ ವೃದ್ಧ, ಜನತಾ ಕಾಲೋನಿ ಮುಖ್ಯ ರಸ್ತೆಯ 9 ರ ಬಾಲಕಿ, ಶಾಮನೂರಿನ 55ರ ಮಹಿಳೆ, 32ರ ಮಹಿಳೆ, 5ರ ಬಾಲಕಿ, 9ರ ಬಾಲಕಿ, 6ರ ಬಾಲಕಿ, 1 ವರ್ಷದ ಗಂಡು ಮಗು, ಆಂಜನೇಯ ಬಡಾವಣೆಯ 21ರ ಮಹಿಳೆ, ರಂಗನಾಥ ಕಾಲೋನಿಯ 91ರ ವೃದ್ಧ, ಎಸ್.ಪಿ.ಎಸ್. ನಗರ 2ನೇ ಸ್ಟೇಜ್‌ನ 50ರ ಮಹಿಳೆ, ರಂಗನಾಥ ಕಾಲೋನಿಯ 82ರ ವೃದ್ಧ.

ದೊಡ್ಡಬಾತಿ 8ರ ಬಾಲಕ, 12ರ ಬಾಲಕ, 14ರ ಬಾಲಕ, 7ರ ಬಾಲಕ, 20ರ ಯುವಕ, ಕೋಡಿಹಳ್ಳಿಯ 40ರ ಪುರುಷ, 35ರ ಮಹಿಳೆ, 4 ವರ್ಷದ ಹೆಣ್ಣು ಮಗು, ದೊಡ್ಡಪೇಟೆಯ 56ರ ಪುರುಷ, ಪಿಜೆ ಬಡಾವಣೆಯ 7ನೇ ಮೇನ್‌ನ 95ರ ವೃದ್ಧೆ, ವಿನೋಬನಗರ 2ನೇ ಕ್ರಾಸ್‌ನ 60ರ ಮಹಿಳೆ, ಜಯನಗರ ಬಿ ಬ್ಲಾಕ್‌ನ 54ರ ಪುರುಷ, ಕೆಇಬಿ ಕ್ವಾಟ್ರಸ್‌ನ 26ರ ಪುರುಷ, ವಿದ್ಯಾನಗರ 31ರ ಪುರುಷ, ವಿನೋಬನಗರ 10ನೇ ಕ್ರಾಸ್‌ನ 42ರ ಪುರುಷ, ಮಂಡಕ್ಕಿ ಭಟ್ಟಿಯ 5 ವರ್ಷದ ಗಂಡು ಮಗು, ಮುಸ್ತಾಫಾ ನಗರ 4ನೇ ಕ್ರಾಸ್‌ನ 21ರ ಮಹಿಳೆ, ಸಿದ್ದನೂರಿನ 20ರ ಪುರುಷ.



ದಾವಣಗೆರೆಯ ವಿಜಯನಗರ, ಕೊಂಡಜ್ಜಿ ರಸ್ತೆ, ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರದ 13 ರ ಬಾಲಕಿ, ಬಸವೇಶ್ವರ ಬಡಾವಣೆಯ 27ರ ಮಹಿಳೆ, 20ರ ಪುರುಷ, 30ರ ಮಹಿಳೆ, 26 ಮಹಿಳೆ, ಒಳ ಬಾತಿ ಗುಡ್ಡದ 20ರ ಪುರುಷ, ವಿನೋಬ ನಗರ 2ನೇ ಮೇನ್ 1ನೇ ಕ್ರಾಸ್, 23ರ ಮಹಿಳೆ, ವಸಂತ ರಸ್ತೆ 73ರ ವೃದ್ದ, ಬೀಡಿ ಲೇಔಟ್ ಕ್ರಾಸ್ 42 ಮಹಿಳೆ, ಪಿ.ಜೆ. ಬಡಾವಣೆ 33ರ ಮಹಿಳೆ, 23ರ ಮಹಿಳೆ, ಬನಶಂಕರಿ ಬಡಾವಣೆ, ವಿನೋಬ ನಗರ 1ನೇ ಮೇನ್ 17ನೇ ಕ್ರಾಸ್, 75ರ ವೃದ್ದ, 63ರ ವೃದ್ದ, ಸರಸ್ವತಿ ನಗರ 63 ರ ಮಹಿಳೆ, ಕುರ್ಕಿ ಗ್ರಾಮದ 35ರ ಮಹಿಳೆ, ಆಂಜನೇಯ ಬಡಾವಣೆಯ, 35ರ ಪುರುಷ, 78ರ ವೃದ್ದ, ಕುವೆಂಪು ನಗರದ 53 ರ ಮಹಿಳೆ, ಶೇಖರಪ್ಪ ನಗರದ 75ರ ವೃದ್ದೆ, ದೊಡ್ಡ ಬಾತಿಯ 50ರ ಪುರುಷ, ವಿನಾಯಕ ನಗರದ 35ರ ಪುರುಷ.

ಸಲಗನಹಳ್ಳಿಯ 25 ವರ್ಷದ ಮಹಿಳೆ, ಕೆಂಗಾಪುರದ 12 ರ ಬಾಲಕಿ, ದಾವಣಗೆರೆ ಸಿದ್ದವೀರಪ್ಪ ಬಡಾವಣೆ 14ನೇ ಕ್ರಾಸ್‌ನ 51 ರ ಮಹಿಳೆ, ವಿದ್ಯಾನಗರ 3ನೇ ಕ್ರಾಸ್‌ನ 28 ರ ಮಹಿಳೆ, ದೇವರಾಜ ಅರಸು ಬಡಾವಣೆಯ 95 ರ ವೃದ್ಧೆ, ಜೆಜೆಎಂಎಂಸಿಯ ಆರ್ಥೋ ವಿಭಾಗದ 47 ರ ಮಹಿಳೆ, ಭಗತ್‌ಸಿಂಗ್ ನಗರ 2ನೇ ಹಂತದ 34 ರ ಪುರುಷ, ಎಂಸಿಸಿ ಬಿ ಬ್ಲಾಕ್ 2ನೇ ಮುಖ್ಯರಸ್ತೆ, 3ನೇ ಕ್ರಾಸ್ 23 ರ ಪುರುಷ, ಜೆಜೆಎಂಎಂಸಿಯ ಆರ್ಥೋ ವಿಭಾಗದ 58 ರ ಪುರುಷ, ಎಸ್‌ಕೆಎಸ್ ಬಡಾವಣೆಯ 57 ರ ಪುರುಷ, ಬಸವರಾಜಪೇಟೆಯ 60 ರ ಪುರುಷ, ಅರುಣ ಥಿಯೇಟರ್ ಬಳಿಯ 69 ರ ಪುರುಷ, ಮೆಡಿಕಲ್ ಹಾಸ್ಟೆಲ್ ಬಳಿಯ 26ರ ಪುರುಷ, ಇನ್ಸಿಟ್ಯೂಷನಲ್ ಕ್ವಾರಂಟೈನ್‌ನ 43 ರ ಪುರುಷ, ಮೆಳ್ಳಿಕಟ್ಟೆಯ 46 ರ ಮಹಿಳೆ, 36 ರ ಪುರುಷ, ಸರಸ್ವತಿ ನಗರ ಸಿ ಬ್ಲಾಕ್‌ನ 43 ರ ಪುರುಷ, ಸಿದ್ಧಗಂಗಾ ಶಾಲೆಯ ಹಿಂಭಾಗದ 42 ರ ಮಹಿಳೆ, ಚಾಮರಾಜ ಪೇಟೆಯ 66 ರ ವೃದ್ಧ, 70 ರ ಪುರುಷ, ಹೊಸಬೆಳವನೂರಿನ 75 ರ ವೃದ್ಧ, ದಾವಣಗೆರೆಯ 36 ರ ಪುರುಷ, ಕಂದಗಲ್‌ನ 50 ರ ಪುರುಷ, ವಿನೋಬನಗರ 7ನೇ ಕ್ರಾಸ್‌ನ 65 ರ ಮಹಿಳೆ, ಲೇಬರ್ ಕಾಲೋನಿಯ 60 ರ ಪುರುಷ, ಕಲಪನಹಳ್ಳಿಯ 63 ರ ಪುರುಷ, ಎಂಸಿಸಿ ಬಿ ಬ್ಲಾಕ್ 5ನೇ ಮುಖ್ಯರಸ್ತೆ, 8ನೇ ಕ್ರಾಸ್‌ನ 55 ರ ಪುರುಷ, ಆಂಜನೇಯ ಬಡಾವಣೆ 11ನೇ ಕ್ರಾಸ್‌ನ 25 ರ ಪುರುಷ, ನಗರಕಟ್ಟೆಯ 56 ರ ಪುರುಷ, ಸರಸ್ವತಿ ನಗರ 1ನೇ ಮೇನ್, 3ನೇ ಕ್ರಾಸ್‌ನ 68 ರ ಪುರುಷ, ವಿನೋಬನಗರ 12ನೇ ಕ್ರಾಸ್‌ನ 53 ರ ಪುರುಷ, ವಿದ್ಯಾನಗರ 4ನೇ ಕ್ರಾಸ್‌ನ 36 ರ ಪುರುಷ, ಸರಸ್ವತಿ ನಗರದ 43 ರ ಪುರುಷ, ಪಿಜೆ ಬಡಾವಣೆಯ 2ನೇ ಮುಖ್ಯರಸ್ತೆಯ 45 ರ ಪುರುಷ, ಸಿದ್ದವೀರಪ್ಪ ಬಡಾವಣೆ 7ನೇ ಕ್ರಾಸ್‌ನ 43ರ ಪುರುಷ, ವಿವೇಕಾನಂದ ಬಡಾವಣೆ 6ನೇ ಕ್ರಾಸ್‌ನ 42ರ ಮಹಿಳೆ, ಹದಡಿ ವೃತ್ತದ 38 ರ ಪುರುಷ, ಪಿಜೆ ಬಡಾವಣೆ 7ನೇ ಮೇನ್, 7ನೇ ಕ್ರಾಸ್‌ನ 51 ರ ಪುರುಷ, ಪೊಲೀಸ್ ಕ್ವಾರ್ಟರ್ಸ್‌ನ 44ರ ಪುರುಷ, ಶಕ್ತಿ ನಗರ ನಿಟ್ಟುವಳ್ಳಿಯ 34 ರ ಮಹಿಳೆ, ಮಲೇಬೆನ್ನೂರು ಪೊಲೀಸ್ ಠಾಣೆಯ 40ರ ಪುರುಷ, ಕೊರಚರಹಟ್ಟಿ ಕೆಟಿಜೆ ನಗರ ಪೊಲೀಸ್ ಠಾಣೆಯ 50 ರ ಪುರುಷ.

ಬಿ.ಕಲಪನಹಳ್ಳಿಯ 60ರ ಪುರುಷ, ವಿಜಯನಗರ ಬಡಾವಣೆ ಮುಖ್ಯ ರಸ್ತೆಯ 60ರ ಪುರುಷ, ಕೆಟಿಜೆ ನಗರ 4ನೇ ಕ್ರಾಸ್‌ನ 34ರ ಪುರುಷ, ಡಿಸಿಎಂ ಟೌನ್‌ಶಿಪ್‌ನ 2ನೇ ಕ್ರಾಸ್‌ನ 31ರ ಪುರುಷ, ಶಿವಕುಮಾರ ಸ್ವಾಮಿ ಬಡಾವಣೆ 4ನೇ ಕ್ರಾಸ್ ನ 29ರ ಪುರುಷ, ಆಂಜನೇಯ ಬಡಾವಣೆ 18ನೇ ಕ್ರಾಸ್‌ನ 46ರ ಪುರುಷ, ವಿದ್ಯಾನಗರ 2ನೇ ಕ್ರಾಸ್‌ನ 45ರ ಪುರುಷ, ಆಲೂರಿನ 50ರ ಮಹಿಳೆ, 65ರ ಪುರುಷ, ಪಿಜೆ ಬಡಾವಣೆಯ 59ರ ಮಹಿಳೆ, ತರಳಬಾಳು ಬಡಾವಣೆಯ 67ರ ಪುರುಷ, 67ರ ಮಹಿಳೆ, ಕೋಡಿಹಳ್ಳಿಯ 17ರ ಪುರುಷ, 68ರ ಮಹಿಳೆ, 18ರ ಬಾಲಕಿ, 34ರ ಪುರುಷ, 30ರ ಪುರುಷ, ದೊಡ್ಡಬಾತಿಯ 33ರ ಪುರುಷ, 40ರ ಮಹಿಳೆ, 28ರ ಮಹಿಳೆ ಸೇರಿ ಒಟ್ಟು 244 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

# ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾಕ್ಕೆ ನೇಮಕ

ದಾವಣಗೆರೆ, ಆ.20- ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು ಹಾಗೂ ಸದಸ್ಯರುಗಳನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಆದೇಶದ ಮೇರೆಗೆ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ಮಂಜುಳ ಮಹೇಶ್ ನೇಮಕ ಮಾಡಿದ್ದಾರೆ.

ಅಧ್ಯಕ್ಷರಾಗಿ ಶ್ರೀಮತಿ ಮಂಜುಳ ಮಹೇಶ್ (ದಾವಣಗೆರೆ ಉತ್ತರ), ಉಪಾಧ್ಯಕ್ಷರಾಗಿ ಶ್ರೀಮತಿ ಪುಷ್ಪ ದುರುಗೇಶ್ (ದಾವಣಗೆರೆ ದಕ್ಷಿಣ), ಶ್ರೀಮತಿ ದೀಪಾ ಜಗದೀಶ್ (ಹೊನ್ನಳ್ಳಿ), ಶ್ರೀಮತಿ ಚಂದ್ರಿಕಾ ಜಗನಾಥ್ (ದಾವಣಗೆರೆ ಉತ್ತರ), ಶ್ರೀಮತಿ ಸುಜಾತಾ ಚನ್ನಬಸಪ್ಪ (ಚನ್ನಗಿರಿ), ಶ್ರೀಮತಿ ಲಕ್ಷ್ಮೀದೇವಿ ಪಾಟೇಲ್ (ಹರಿಹರ) ಅವರುಗಳನ್ನು ನೇಮಕ ಮಾಡಿದ್ದಾರೆ.

**ಪ್ರಧಾನ ಕಾರ್ಯದರ್ಶಿ** : ಶ್ರೀಮತಿ ಸವಿತಾ ರವಿಕುಮಾರ್ (ದಾವಣಗೆರೆ ಉತ್ತರ ), ಶ್ರೀಮತಿ ಪುಷ್ಪ ವಾಲಿ ( ದಾವಣಗೆರೆ ಉತ್ತರ)

**ಕಾರ್ಯದರ್ಶಿಗಳು** : ಶ್ರೀಮತಿ ನಾಗರತ್ನಬಾಯಿ ಕಾಟೇ (ದಾವಣಗೆರೆ ದಕ್ಷಿಣ), ಶ್ರೀಮತಿ ವೀಣಾ ಮಲ್ಲಿಕಾರ್ಜುನ (ಜಗಳೂರು), ಶ್ರೀಮತಿ ರೇಖಾ. ಎಂ. ಮುರುಘರಾಜೇಂದ್ರ (ದಾವಣಗೆರೆ ಉತ್ತರ), ಶ್ರೀಮತಿ ಸೌಮ್ಯ ಕಾಕಡೆ ( ದಾವಣಗೆರೆ ಉತ್ತರ), ಶ್ರೀಮತಿ ಜ್ಯೋತಿ ( ದಾವಣಗೆರೆ ಉತ್ರರ)

**ಕೋಶ್ಯಾಧ್ಯಕ್ಷರು** : ಶ್ರೀಮತಿ ಗೀತಾ ಗಂಗಾ ನಾಯ್ಕ್ (ಮಾಯಕೊಂಡ)

**ಸದ್ಯಸರುಗಳು** : ಶ್ರೀಮತಿ ಗೌರಮ್ಮ ಪಾಟೀಲ್, ಶ್ರೀಮತಿ ಉಷಾ, ಜಿ. ಬದ್ದಿ, ಶ್ರೀಮತಿ ವೀಣಾ ರಮೇಶ್, ಶ್ರೀಮತಿ ವಿಜಯಲಕ್ಷ್ಮಿ ಹನುಮಂತಪ್ಪ, ಶ್ರೀಮತಿ ಯೋಶದಮ್ಮ ರಾಜಪ್ಪ, ಶ್ರೀಮತಿ ನಾಗಮ್ಮ ನಾಗೇಂದ್ರಪ್ಪ, ಶ್ರೀಮತಿ ಪ್ರಭಾವತಿ ಹಾಲಪ್ಪ, ಶ್ರೀಮತಿ ರೂಪಾ. ಎಂ.ಕೆ. ಶಿವುಕುಮಾರ್, ಶ್ರೀಮತಿ ನಾಗರತ್ನ ನಾರಾಯಣಪ್ಪ, ಶ್ರೀಮತಿ ಸವಿತಾ ಜಯ್ ಕುಮಾರ್, ಶ್ರೀಮತಿ ರೇಣುಕಮ್ಮ ಬಣಕಾರ್.

# ಪರಿಸರ ಸ್ನೇಹಿಯಾಗಿ ಗಣೇಶ ಚತುರ್ಥಿ ಆಚರಿಸಲು ಮಾರ್ಗಸೂಚಿ

ದಾವಣಗೆರೆ, ಆ.20- ನಾಡಿದ್ದು ದಿನಾಂಕ 22 ರಂದು ಆಚರಿಸಲಿರುವ ಗಣೇಶ ಚತುರ್ಥಿಯನ್ನು ಪರಿಸರ ಸಂರಕ್ಷಣೆ ದೃಷ್ಟಿಯಿಂದ ಹಾಗೂ ಪರಿಸರ ಸ್ನೇಹಿಯಾಗಿ ಆಚರಿಸಲು ಗಣೇಶ ಮೂರ್ತಿ ತಯಾರಕರಲ್ಲಿ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಅನುಸರಣಾ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಮಹಾನಗರ ಪಾಲಿಕೆ ಕರೆ ನೀಡಿದೆ.

ಗಣೇಶ ಮೂರ್ತಿಗಳನ್ನು ಜೇಡಿ ಮಣ್ಣಿನಿಂದ ತಯಾರಿಸಿ, ಬಣ್ಣ ರಹಿತ ಅಥವಾ ನೈಸರ್ಗಿಕ ಬಣ್ಣ ಲೇಪಿತ ಮೂರ್ತಿಗಳನ್ನು ಮಾತ್ರ ಮಾರಾಟ ಮಾಡುವುದು. ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಗಣೇಶ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡುವವರ ವಿರುದ್ಧ ಮಹಾನಗರ ಪಾಲಿಕೆ ಕಾಯ್ದೆ ರೀತ್ಯಾ ಕಾನೂನು ಕ್ರಮ ಕೈಗೊಳ್ಳಲಾಗುವುದು ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನು ವಶಪಡಿಸಿಕೊಳ್ಳಲಾಗುವುದು. ಅಲ್ಲದೇ, 10,000 ರೂ.ಗಳ ದಂಡ ವಿಧಿಸಲಾಗುವುದು ಎಂದು ನಗರಪಾಲಿಕೆ ಎಚ್ಚರಿಸಿದೆ.

ಯಾವುದೇ ಕಾರಣಕ್ಕೂ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಗಣೇಶ ಮೂರ್ತಿಗಳನ್ನು ತಯಾರಿಸಿ, ಮಾರಾಟ ಮಾಡಬಾರದೆಂದು ಸೂಚಿಸಲಾಗಿದೆ. ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನು ಖರೀದಿಸಬಾರದು. ಈ ಮೂಲಕ ಪರಿಸರ ಹಿತರಕ್ಷಣೆಗಾಗಿ ಸಹಕರಿಸಬೇಕೆಂದು ಮಹಾನಗರ ಪಾಲಿಕೆ ವಿನಂತಿಸಿದೆ.

## ಕರ್ನಾಟಕ ಸರ್ಕಾರ

# ಮಹಾನಗರ ಪಾಲಿಕೆ ದಾವಣಗೆರೆ



# ಶ್ರೀ ಗಣೇಶೋತ್ಸವ ಆಚರಿಸುವ ಮಾರ್ಗಸೂಚಿಗಳು

1. ಶ್ರೀ ಗಣೇಶ ಚತುರ್ಥಿ ಹಬ್ಬವನ್ನು ಸರಳ ರೀತಿಯಲ್ಲಿ ಭಕ್ತಿಪೂರ್ವಕವಾಗಿ ದೇವಸ್ಥಾನದೊಳಗೆ, ತಮ್ಮ ಮನೆಗಳಲ್ಲಿ ಅಥವಾ ಸರ್ಕಾರಿ/ಖಾಸಗಿ/ಸಾರ್ವಜನಿಕ ಬಯಲು ಪ್ರದೇಶಗಳಲ್ಲಿ ಕನಿಷ್ಟ ಸಂಖ್ಯೆಯೊಂದಿಗೆ ಆಚರಿಸಬಹುದು.

2. ಈ ರೀತಿ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವವರು ಗಣೇಶ ಮೂರ್ತಿಯನ್ನು ನಾಲ್ಕು ಅಡಿ ಎತ್ತರ ಮೀರದಂತೆ ಹಾಗೂ ಮನೆಯೊಳಗೆ ಎರಡು ಅಡಿ ಮೀರದಂತೆ ಪ್ರತಿಷ್ಠಾಪಿಸುವುದು.

3. ಪಾರಂಪರಿಕ ಗಣೇಶೋತ್ಸವಕ್ಕಾಗಿ, ಗಣೇಶೋತ್ಸವ ಸಮಿತಿಗಳು/ಮಂಡಳಿಗಳು ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಮುನಿಸಿಪಲ್ ಕಾರ್ಪೋರೇಷನ್/ಸ್ಥಳೀಯ ಆಡಳಿತದಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು, ಒಂದು ವಾರ್ಡಿಗೆ/ಗ್ರಾಮಕ್ಕೆ ಒಂದು ಸಾರ್ವಜನಿಕ ಗಣೇಶೋತ್ಸವವನ್ನು ಮಾತ್ರ ಅಚರಿಸಲು ಪ್ರೋತ್ಸಾಹಿಸುವುದು.

4. ಇಂತಹ ಸ್ಥಳಗಳಲ್ಲಿ 20 ಜನಕ್ಕೆ ಸೀಮಿತವಾದ ಆವರಣವನ್ನು ನಿರ್ಮಿಸುವುದು. ಒಮ್ಮೆಲೇ 20ಕ್ಕಿಂತ ಹೆಚ್ಚಿನ ಜನ ಸೇರದಂತೆ ಭಕ್ತಾಧಿಗಳಿಗೆ ಅನುವು ಮಾಡುವುದು.

5. ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಯಾವುದೇ ರೀತಿಯ ಸಾಂಸ್ಕೃತಿಕ/ಸಂಗೀತ/ನೃತ್ಯ ಇನ್ನಿತರ ಯಾವುದೇ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶವಿರುವುದಿಲ್ಲ.

6. ಶ್ರೀ ಗಣೇಶ ಮೂರ್ತಿಗಳನ್ನು ತರುವಾಗ ಹಾಗೂ ವಿಸರ್ಜಿಸುವಾಗ ಯಾವುದೇ ಕಾರಣಕ್ಕಾಗಲಿ ಅಥವಾ ಯಾವುದೇ ಸಂದರ್ಭಗಳಲ್ಲಿ ಯಾವುದೇ ರೀತಿಯ ಮೆರವಣಿಗೆಯನ್ನು ಹೊರಡಿಸತಕ್ಕದ್ದಲ್ಲ / ಮಾಡತಕ್ಕದ್ದಲ್ಲ. ಇದನ್ನು ಸಂಪೂರ್ಣವಾಗಿ ನಿರ್ಬಂಧಿಸಿದೆ.

7. ಪಾರಂಪರಿಕ ಗಣೇಶ ಮೂರ್ತಿ ಮತ್ತು ಮನೆಯಲ್ಲಿ ವಿಗ್ರಹಗಳನ್ನು ಪೂಜಿಸುವವರು ಅವುಗಳನ್ನು ಮನೆಯಲ್ಲಿಯೇ ವಿಸರ್ಜಿಸುವುದು ಮತ್ತು ಸರ್ಕಾರಿ/ಖಾಸಗಿ ಬಯಲು ಪ್ರದೇಶಗಳಲ್ಲಿ ಪ್ರತಿಷ್ಠಾಪಿಸುವ ಗಣೇಶ ಮೂರ್ತಿಗಳನ್ನು ಅತೀ ಸಮೀಪವಾಗುವಂತಹ ಮಾರ್ಗಗಳನ್ನು ಬಳಸಿಕೊಂಡು ಮಹಾನಗರ ಪಾಲಿಕೆ/ಜಿಲ್ಲಾಡಳಿತ/ಹತ್ತಿರದ ಸ್ಥಳೀಯ ಸಂಸ್ಥೆಗಳ/ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಈಗಾಗಲೇ ನಿರ್ಮಿಸಲಾದ ಹೊಂಡ ಅಥವಾ ಮೊಬೈಲ್ ಟ್ಯಾಂಕ್‌ಗಳಲ್ಲಿ ಅಥವಾ ಕೃತಕ ವಿಸರ್ಜನಾ ಟ್ಯಾಂಕರ್‌ಗಳಲ್ಲಿ ವಿಸರ್ಜಿಸುವುದು.

8. ಶ್ರೀ ಗಣೇಶ ಚತುರ್ಥಿ ಆಚರಿಸುವ ದೇವಸ್ಥಾನ/ಸಾರ್ವಜನಿಕ ಸ್ಥಳಗಳಲ್ಲಿ ದಿನನಿತ್ಯ ಸ್ಯಾನಿಟೈಸೇಷನ್ ಮಾಡುವುದು ಹಾಗೂ ಸಾರ್ವಜನಿಕ ದರ್ಶನಕ್ಕಾಗಿ ಅಗಮಿಸುವ ಭಕ್ತಾಧಿಗಳಿಗೆ ಸ್ಯಾನಿಟೈಸರ್ ಹಾಗೂ ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದು.

9. ದರ್ಶನಕ್ಕಾಗಿ ಬರುವ ಭಕ್ತರಿಗೆ ಕನಿಷ್ಟ 06 ಅಡಿ ಸಾಮಾಜಿಕ ಅಂತರವನ್ನು ಗುರುತಿಸುವುದು ಹಾಗೂ ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

10. ಭಕ್ತಾಧಿಗಳು ಮತ್ತು ಸಾರ್ವಜನಿಕರು ಕಡ್ಡಾಯವಾಗಿ ಮುಖಗವಸು ಧರಿಸಿರತಕ್ಕದ್ದು.

11. ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ನಿರ್ದೇಶನಗಳನ್ನು ಹಾಗೂ ರಾಜ್ಯ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅಲ್ಲದೇ, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ, ಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿಶಾಮಕ ಇಲಾಖೆ, ಜಿಲ್ಲಾಡಳಿತ ಹಾಗೂ ಇತರ ಇಲಾಖೆಗಳಿಂದ ಹೊರಡಿಸಲಾದ ಸೂಚನೆ ಹಾಗೂ ಮಾರ್ಗಸೂಚಿಗಳನ್ನು ಸಹ ಕಡ್ಡಾಯವಾಗಿ ಪಾಲಿಸತಕ್ಕದ್ದು.

12. ಶ್ರೀ ಗಣೇಶೋತ್ಸವ ಆಚರಣೆ ಕಾಲಕ್ಕೆ ಸಂದರ್ಭಕ್ಕನುಗುಣವಾಗಿ ಸರ್ಕಾರ, ಜಿಲ್ಲಾಡಳಿತ, ಪೊಲೀಸ್, ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆ/ಪ್ರಾಧಿಕಾರಗಳಿಂದ ಹೊರಡಿಸಲಾಗುವ ಎಲ್ಲಾ ಆದೇಶ/ನಿರ್ದೇಶನ ಹಾಗೂ ಸೂಚನೆಗಳನ್ನು ಸಹ ಕಡ್ಡಾಯವಾಗಿ ಪಾಲಿಸತಕ್ಕದ್ದು.

13. ಹಬ್ಬ-ಹರಿದಿನಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮರಸ್ಯಗಳು ಉಂಟಾಗಲು ಪೂರಕವಾಗಿರುವುದರಿಂದ ಶ್ರೀ ಗಣೇಶೋತ್ಸವ ಹಬ್ಬವನ್ನು ಅದೇ ರೀತಿಯಿಂದಲೇ ಆಚರಿಸುವ ಮೂಲಕ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಭಂಗ ಬಾರದಂತೆ ಕಾಪಾಡುವುದು.

14, ರಾಷ್ಟ್ರೀಯ ನಿರ್ದೇಶನಗಳನ್ನು ಹಾಗೂ ರಾಜ್ಯ ಸರ್ಕಾರದ ಆದೇಶ/ಮಾರ್ಗಸೂಚಿಗಳನ್ನು ಉಲ್ಲಂಘಿಸುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ, 2005 ಹಾಗೂ ಭಾರತೀಯ ದಂಡ ಸಂಹಿತೆ ಸೆಕ್ಷನ್ 188ರ ಅಡಿಯಲ್ಲಿ ಶಿಸ್ತಿನ/ಕಾನೂನುಕ್ರಮಮತ್ತುಅನ್ವಯವಾಗಬಹುದಾದಇತರೆಕಾನೂನುಉಪಬಂಧಗಳಮೇರೆಗೆಕ್ರಮಜರುಗಿಸಲಾಗುವುದು.

ದಿನಾಂಕ 22-08-2020, 24-08-2020 ಮತ್ತು 26-08-2020ರಂದು ಶ್ರೀ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡಲು ತಾತ್ಕಾಲಿಕವಾಗಿ ಈ ಕೆಳಕಂಡ ಸ್ಥಳಗಳಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯಿಂದ ಟ್ರಾಕ್ಟರ್ ಟ್ರೇಲರ್‌ಗಳನ್ನು ನಿಲುಗಡೆಗೊಳಿಸಲಾಗಿರುತ್ತದೆ ಮತ್ತು ಬಾತಿಕೆರೆ ಹತ್ತಿರ ಹಾಗೂ ಹದಡಿ ರಸ್ತೆ ಭದ್ರಾ ಚಾನಲ್ ಬಳಿ ಕೃತಕ ಹೊಂಡಗಳನ್ನು ನಿರ್ಮಿಸಲಾಗಿರುತ್ತದೆ. ಸದರಿ ಸ್ಥಳಗಳಲ್ಲಿ ಮಾತ್ರ ಶ್ರೀ ಗಣೇಶ ಮೂರ್ತಿಗಳನ್ನು ವಿಸರ್ಜಿಸಿ, ಜಲಮಾಲಿನ್ಯ ಮತ್ತು ಪರಿಸರ ಮಾಲಿನ್ಯ ತಡೆಯುವಲ್ಲಿ ಮಹಾನಗರ ಪಾಲಿಕೆಯೊಂದಿಗೆ ಸಹಕರಿಸಲು ಕೋರಿದೆ. ಸಾರ್ವಜನಿಕ/ಖಾಸಗಿ ಬಾವಿ/ಕೆರೆ/ಕಾಲುವೆ/ಹಳ್ಳ/ಕೊಳ್ಳಗಳಲ್ಲಿ ಯಾವುದೇ ಕಾರಣಕ್ಕೂ ವಿಸರ್ಜನೆ ಮಾಡತಕ್ಕದ್ದಲ್ಲ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

**ಟ್ರಾಕ್ಟರ್ ಟ್ರೇಲರ್‌ಗಳನ್ನು ನಿಲುಗಡೆಗೊಳಿಸಲಾಗುವ ಸ್ಥಳಗಳು :** 1) ವೆಂಕಟೇಶ್ವರ ವೃತ್ತ, ಬೇತೂರು ರಸ್ತೆ, 2) ಬಂಬೂಬಜಾರ್ (ಗಣೇಶ ಹೋಟೆಲ್ ಹತ್ತಿರ), 3) ಹಗೇದಿಬ್ಬ ವೃತ್ತ, 4) ದುರ್ಗಾಂಬಿಕಾ ದೇವಸ್ಥಾನ (ಶಿವಾಜಿ ವೃತ್ತ), 5) ಹೊಂಡದ ವೃತ್ತ, 6) ಬಸವೇಶ್ವರ ವೃತ್ತ, ಕಾಯಿಪೇಟೆ, 7) ಕುರುಬರ ಕೇರಿ, 8) ಡಾಂಗೆ ಪಾರ್ಕ್, 9) ರಾಮ್ ಅಂಡ್ ಕೋ ಸರ್ಕಲ್, 10) ಗಣೇಶ ದೇವಸ್ಥಾನ ಹತ್ತಿರ, ಬಾಪೂಜಿ ಶಾಲೆ, 11) ಆಂಜನೇಯ ದೇವಸ್ಥಾನ, ಆಂಜನೇಯ ಬಡಾವಣೆ, 12) ಈಶ್ವರ ಪಾರ್ವತಿ ದೇವಸ್ಥಾನ, ವಿದ್ಯಾನಗರ, 13) 3ನೇ ಮುಖ್ಯರಸ್ತೆ, ವಿನೋಬನಗರ, 14) ವಿಠಲ ಮಂದಿರ, ಮಹಾರಾಜ ಪೇಟೆ, 15) ಆವರಗೆರೆ, 16) ಗುಂಡಿ ಮಹಾದೇವಪ್ಪ ಸರ್ಕಲ್, 17) ದುರ್ಗಾಂಬಿಕಾ ದೇವಸ್ಥಾನ, ನಿಟುವಳ್ಳಿ, 18) ಹೆಚ್.ಕೆ.ಆರ್. ಸರ್ಕಲ್, 19) ಸಂಜೀವಿನಿ ಆಂಜನೇಯ ದೇವಸ್ಥಾನ, ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, 20) ಮೈಲಾರಲಿಂಗೇಶ್ವರ ದೇವಸ್ಥಾನ, ಕೊಂಡಜ್ಜಿ ರಸ್ತೆ (ಶಿಬಾರ), 21) ಬನ್ನಿಮರದ ಹತ್ತಿರ, ರಿಂಗ್ ರಸ್ತೆ, ಎಸ್.ಎಸ್. ಲೇ ಔಟ್, 22) ಜಯದೇವ ವೃತ್ತ, 23) ಗಣೇಶ ದೇವಸ್ಥಾನ ಹತ್ತಿರ, ಬಕ್ಕೇಶ್ವರ ಸ್ಕೂಲ್ ಮುಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, 24) ಪಂಚಮುಖಿ ಆಂಜನೇಯ ದೇವಸ್ಥಾನ, ಸರಸ್ವತಿ ಬಡಾವಣೆ, 25) ಕೋರ್ಟ್ ಹಿಂಭಾಗ, ದೇವರಾಜ ಅರಸು ಬಡಾವಣೆ, 26) ಬಾಪೂಜಿ ಬ್ಯಾಂಕ್ ಹತ್ತಿರ, ಆಂಜನೇಯ ಬಡಾವಣೆ, ಬಿ.ಐ.ಇ.ಟಿ. ರಸ್ತೆ, 27) ಡಿ.ಸಿ.ಎಂ. ಲೇ ಔಟ್ ಸರ್ಕಲ್ ಹತ್ತಿರ, 28) ಹಳೇ ಕುಂದುವಾಡ, 29) ಹಾಸಬಾವಿ ವೃತ್ತ, 30) ಶ್ಯಾಮನೂರು

**ಪೂಜ್ಯ ಮಹಾಪೌರರು**
ಮಹಾನಗರ ಪಾಲಿಕೆ, ದಾವಣಗೆರೆ.

**ಆಯುಕ್ತರು**
ಮಹಾನಗರ ಪಾಲಿಕೆ, ದಾವಣಗೆರೆ.

## ನದಿಯಲ್ಲಿ ಮುಳುಗಿದ ಮಗಳ ಶವ ಹುಡುಕಿಸಲು ಪಾಲಕರ ಒತ್ತಾಯ



ರಾಣೇಬೆನ್ನೂರು, ಆ. 20 - ಇದೇ ದಿನಾಂಕ 16 ರಂದು ಕುಮದ್ವತಿ ನದಿಯಲ್ಲಿ ಮುಳುಗಿರುವ ತಮ್ಮ ಮಗಳು ಶಶಿಕಲಾ ಶವವನ್ನು ಸರ್ಕಾರದಿಂದ ಎನ್ ಡಿ ಆರ್ ಎಫ್ ತಂಡದ ಮೂಲಕ ಹುಡುಕಿಸಿ ಕೊಡುವಂತೆ ಶಿವಪ್ಪ ಹಾಗೂ ನಾಗಮ್ಮ ದಂಪತಿ ತಹಶೀಲ್ದಾರರಿಗೆ ಇಂದು ಮನವಿ ಸಲ್ಲಿಸಿದರು.

ತಾಲ್ಲೂಕಿನ ಮಲಕನಹಳ್ಳಿ ಗ್ರಾಮದ ಯುವತಿ ಶಶಿಕಲಾ ಅಂದು ಸಂಜೆ ಬಟ್ಟೆ ತೊಳೆಯಲು ಗ್ರಾಮದ ಕುಮದ್ವತಿ ನದಿಗೆ ತೆರಳಿದಾಗ ಕಾಲು ಜಾರಿ ನದಿಯಲ್ಲಿ ಮುಳುಗಿದ್ದಳು. ಹಲಗೇರಿ ಠಾಣೆ ಪೋಲೀಸರು ಹಾಗೂ ಅಗ್ನಿಶಾಮಕ ದಳದವರು ಇದುವರೆಗೂ ಪ್ರಯತ್ನಿಸಿದರು ತಮ್ಮ ಮಗಳ ಶವ ಸಿಕ್ಕಿಲ್ಲ. ಕಾರಣ ನುರಿತ ತಂಡ ಕರೆಸಿ ಮಗಳ ಶವ ಹುಡುಕಿಸುವಂತೆ ಪಾಲಕರು ಆಗ್ರಹಿಸಿದ್ದಾರೆ.

# ಕಂಟೈನ್‌ಮೆಂಟ್ ಝೋನ್ ಮುಕ್ತ ಮುಕ್ತ

## ಸೋಂಕಿತರ ಮನೆಗೆ ಮಾತ್ರ ಕಂಟೈನ್‌ಮೆಂಟ್, ಬ್ಯಾರಿಕೇಡ್- ಹ್ಯಾಂಡ್ ಸ್ಟ್ಯಾಂಪಿಗ್ ಇಲ್ಲ

ಬೆಂಗಳೂರು, ಆ. 20 – ಕಂಟೈನ್‌ಮೆಂಟ್ ವಲಯ ಗುರುತಿಸುವಲ್ಲಿ ಬದಲಾವಣೆಗೆ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರ, ಸೋಂಕಿತ ವ್ಯಕ್ತಿಯ ಮನೆಗೆ ಸೀಮಿತವಾಗಿ ಕಂಟೈನ್‌ಮೆಂಟ್ ವಲಯ ರೂಪಿಸಬೇಕೆಂದು ತಿಳಿಸಿದೆ.

ಕಂಟೈನ್‌ಮೆಂಟ್ ವಲಯ ರೂಪಿಸುವಾಗ ಬ್ಯಾರಿಕೇಡ್ ಅಳವಡಿಸುವ ಅಗತ್ಯವಿರುವುದಿಲ್ಲ ಹಾಗೂ ಪ್ರಕರಣಗಳ ಮತ್ತು ಸಂಪರ್ಕಿತರ ಹ್ಯಾಂಡ್ ಸ್ಟ್ಯಾಂಪಿಂಗ್ ಅಗತ್ಯವಿರುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೊರೊನಾ ವರದಿಯಾದ 14 ದಿನಗಳ ನಂತರವೂ ಸಹ ಯಾವುದೇ ಹೊಸ ಪ್ರಕರಣ ವರದಿಯಾಗದೇ ಇದ್ದಲ್ಲಿ ಹಾಗೂ ಖಚಿತ ಪ್ರಕರಣದ ಸಂಪರ್ಕಿತರನ್ನು 14 ದಿನಗಳ ಅವಧಿಗೆ ನಿಗಾ ಮಾಡಿದ ನಂತರ ಕಂಟೇನ್‌ಮೆಂಟ್ ವಲಯ ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂದು ತಿಳಿಸಲಾಗಿದೆ.

ರಾಜ್ಯದಲ್ಲಿ ಕೊರೊನಾ ಸೋಂಕುಗಳ ಸಂಖ್ಯೆ ಹೆಚ್ಚಾಗುತ್ತಿರುವಂತೆಯೇ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆಯೂ ಏರುತ್ತಿದೆ. ಇದುವರೆಗೂ ರಾಜ್ಯದಲ್ಲಿ ಒಟ್ಟು 38,269 ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಲಾಗಿತ್ತು. ಇವುಗಳ ಪೈಕಿ 27,212 ಸಕ್ರಿಯ ವಲಯಗಳಾಗಿವೆ.

ಕಂಟೈನ್‌ಮೆಂಟ್ ವಲಯಗಳ ಮಿತಿ ಮೀರಿದ್ದು, ಪ್ರಾಧಿಕಾರಗಳಿಗೆ ಸರ್ವೇಕ್ಷಣಾ ಚಟುವಟಿಕೆ ಕೈಗೊಳ್ಳಲು ಅಡ್ಡಿಯಾಗಿದೆ. ಅಲ್ಲದೇ ವಲಯಗಳ ಪರಿಧಿ ನಿರ್ಧರಿಸಲೂ ಕಷ್ಟವಾಗುತ್ತಿದೆ ಎಂದು ಆರೋಗ್ಯ ಮತ್ತು




ಕುಟುಂಬ ಕಲ್ಯಾಣ ಇಲಾಖೆ ಮುಖ್ಯ ಕಾರ್ಯದರ್ಶಿ ಜಾವೀದ್ ಅಖ್ತರ್ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕಂಟೈನ್‌ಮೆಂಟ್ ವಲಯಗಳಲ್ಲಿ ಬದಲಾವಣೆ ತರಲಾಗಿದೆ. ಸ್ವತಂತ್ರ ಮನೆ ಇರುವ ಕಡೆಗಳಲ್ಲಿ ಆ ವ್ಯಕ್ತಿಯ ಮನೆಯನ್ನಷ್ಟೇ ಕಂಟೈನ್‌ಮೆಂಟ್ ವಲಯ ಎಂದು ಗುರುತಿಸಲಾಗುವುದು.

ವಸತಿ ಸಮುಚ್ಛಯಗಳಲ್ಲಿ ದೃಢಪಟ್ಟ ವ್ಯಕ್ತಿಯ ಮನೆ ಇರುವ ಮಹಡಿ ಕಂಟೈನ್‌ಮೆಂಟ್ ವಲಯವಾಗಲಿದೆ. ಕೊಳಗೇರಿ ಪ್ರದೇಶಗಲ್ಲಿ ಕೊರೊನಾ ದೃಢಪಟ್ಟ ವ್ಯಕ್ತಿ ಮನೆ ಇರುವ ರಸ್ತೆ ಕಂಟೈನ್‌ಮೆಂಟ್ ವಲಯವಾಗಲಿದೆ.

ಗ್ರಾಮಾಂತರ ಭಾಗದಲ್ಲಿ ಸೋಂಕಿತ ಇರುವ ಸಂಪೂರ್ಣ ವಾಸಸ್ಥಾನ ಇಲ್ಲವೇ ವ್ಯಕ್ತಿಯ ವಾಸಸ್ಥಾನದ ಅಕ್ಕ – ಪಕ್ಕದಲ್ಲಿ ಪರಸ್ಪರ ಹೊಂದಿಕೊಂಡಂತಿರುವ ಸೂಕ್ಷ್ಮವಾದ ಸಣ್ಣ ಪ್ರದೇಶಗಳನ್ನು ಪರಿಗಣಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ವರದಿಯಾಗುವ ಪ್ರತಿ ಪ್ರಕರಣದ ಮನೆಯ ಮೇಲೆ ನೋಟಿಸ್ ಅಂಟಿಸಬೇಕು, ನೆರೆ ಹೊರೆಯವರಿಗೆ, ವಸತಿ ಸಮುಚ್ಛಯದ ಮಾಲೀಕರ ಒಕ್ಕೂಟಕ್ಕೆ ಮಾಹಿತಿ ನೀಡಬೇಕು. ಹೋಂ ಕ್ವಾರಂಟೈನ್ ನಿಯಮ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಬೇಕೆಂದು ತಿಳಿಸಲಾಗಿದೆ.

ಆದರೆ, ಯಾವುದೇ ಪ್ರದೇಶದಲ್ಲಿ ಪ್ರಕರಣಗಳು ಗುಂಪಾಗಿ ವರದಿಯಾದಲ್ಲಿ ಕಂಟೈನ್‌ಮೆಂಟ್ ವಲಯ ವಿಸ್ತಾರವಾಗಿರಬೇಕು. ಅಕ್ಕ ಪಕ್ಕದಲ್ಲಿರುವ ಸೋಂಕು ಪ್ರಕರಣಗಳ ಗುಂಪು ಒಳಗೊಂಡಿರಬೇಕು ಎಂದು ತಿಳಿಸಲಾಗಿದೆ.


### ಎಲ್ಲಿ, ಎಷ್ಟು ಕಂಟೈನ್‌ಮೆಂಟ್ ವಲಯ

ಸ್ವತಂತ್ರ ಮನೆ ಇರುವ ಕಡೆಗಳಲ್ಲಿ ಆ ವ್ಯಕ್ತಿಯ ಮನೆಯನ್ನಷ್ಟೇ ಕಂಟೈನ್‌ಮೆಂಟ್ ವಲಯ

ವಸತಿ ಸಮುಚ್ಛಯಗಳಲ್ಲಿ ದೃಢಪಟ್ಟ ವ್ಯಕ್ತಿಯ ಮನೆ ಇರುವ ಮಹಡಿ ಕಂಟೈನ್‌ಮೆಂಟ್ ವಲಯ.

ಕೊಳಗೇರಿ ಪ್ರದೇಶಗಲ್ಲಿ ಕೊರೊನಾ ದೃಢಪಟ್ಟ ವ್ಯಕ್ತಿ ಮನೆ ಇರುವ ರಸ್ತೆ ಕಂಟೈನ್‌ಮೆಂಟ್ ವಲಯ.

ಗ್ರಾಮಾಂತರ ಭಾಗದಲ್ಲಿ ಸೋಂಕಿತ ಇರುವ ಸಂಪೂರ್ಣ ವಾಸಸ್ಥಾನ ಇಲ್ಲವೇ ವ್ಯಕ್ತಿಯ ವಾಸಸ್ಥಾನದ ಅಕ್ಕ – ಪಕ್ಕದಲ್ಲಿ ಪರಸ್ಪರ ಹೊಂದಿಕೊಂಡಂತಿರುವ ಸೂಕ್ಷ್ಮವಾದ ಸಣ್ಣ ಪ್ರದೇಶ.




## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.08.2020ರಂದು ನಿಧನರಾದ ಗಣೇಶ ಶಾಮಿಯಾನ ಮಾಲೀಕರೂ, ನಮ್ಮ ಆತ್ಮೀಯರಾದ

**ಶ್ರೀ ಜಿ.ಡಿ. ದೇವರಾಜ್ ಆನೆಕೊಂಡ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಆಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

* ಸುರೇಶ್ ಪೈ * ಅನ್ವರ್ ತುರ್ಚಘಟ್ಟ
ಶ್ರೀ ಗೆಳೆಯರ ಬಳಗ

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 20.08.2020ರಂದು ನಿಧನರಾದ ಗಣೇಶ ಶಾಮಿಯಾನ ಮಾಲೀಕರೂ, ನಮ್ಮ ಆತ್ಮೀಯರಾದ

**ಶ್ರೀ ಜಿ.ಡಿ. ದೇವರಾಜ್ ಆನೆಕೊಂಡ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಆಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಎಸ್.ಎಸ್. ಗಣೇಶ್, ಕೈಗಾರಿಕೋದ್ಯಮಿಗಳು
✦ ಮುನಿಯಪ್ಪ, ಲಕ್ಷ್ಮಿ ಫ್ಲೋರ್ ಮಿಲ್
✦ ಸುನಿಲ್‌ಕುಮಾರ್ ಬಿ.ಜೆ. ✦ ರಮೇಶ್ ಬಿ.ಜೆ.
✦ ಕೆ.ಜಿ. ಶಾಂತರಾಜ್ ✦ ಶ್ರೀಕಾಂತ್ ✦ ಕೆ.ಜಿ. ಶಿವಕುಮಾರ್
✦ ದಿನೇಶ್ ಪಾಟೀಲ್ ✦ ರಾಮನಾಥ್ ಪಿ.ಸಿ.
✦ ಈಶಣ್ಣ ಕಾಡಜ್ಜಿ ✦ ಮಲ್ಲಿಕಾರ್ಜುನ್ ಗೋಣಿವಾಡ

# ಕೆಲ ಮಠಗಳು ಬಂಡವಾಳ ಶಾಹಿಗಳಂತೆ ವ್ಯವಹರಿಸುತ್ತಿರುವುದು ತೆರೆದ ಸತ್ಯ : ಸಾಣೇಹಳ್ಳಿ ಶ್ರೀ



ಸಾಣೇಹಳ್ಳಿ, ಆ.30- ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾರಂಭದಲ್ಲಿ ಪ್ರಖ್ಯಾತ ಮಠಗಳು ಶರಣರ ಸಂದೇಶದಂತೆ ನಡೆದುಕೊಂಡು ಭಕ್ತರ ಬದುಕನ್ನು ಹಸನು ಮಾಡುವ ಕಾಯಕವನ್ನು ನಿಷ್ಪೃಹತೆಯಿಂದಲೇ ಮಾಡುತ್ತಾ ಬಂದಿರುವುದನ್ನು ಅಲ್ಲಗಳೆಯುವಂತಿಲ್ಲ ಎಂದು ತರಳಬಾಳು ಬೃಹನ್ಮಠದ ಸಾಣೇಹಳ್ಳಿ ಶಾಖಾಮಠದ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಸಾಣೇಹಳ್ಳಿ ಶ್ರೀಮಠದಿಂದ ಆಯೋಜನೆಗೊಂಡಿರುವ ‘ಮತ್ತೆ ಕಲ್ಯಾಣ ಅಂತರ್ಜಾಲ ಉಪನ್ಯಾಸ ಮಾಲಿಕೆ’ಯಲ್ಲಿ ಇಂದು ಏರ್ಪಾಡಾಗಿದ್ದ ‘ಶರಣ ಸಂದೇಶ - ಮಠಗಳ ಪಾತ್ರ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಗಳು ಆಶೀರ್ವಚನ ನೀಡಿದರು.

ಕ್ರಮೇಣವಾಗಿ ಕೆಲವು ಮಠಗಳು ತಮ್ಮ ಆಸ್ತಿ, ಆದಾಯ ಹೆಚ್ಚಿಸಿಕೊಳ್ಳುತ್ತಾ, ಅಲ್ಲಿನ ಸ್ವಾಮಿಗಳೂ ಸಹ ಒಂದು ರೀತಿಯ ಬಂಡವಾಳ ಶಾಹಿಗಳಂತೆ ವ್ಯವಹರಿಸುತ್ತಿರುವುದು ತೆರೆದ ಸತ್ಯ ಎಂದರು.

ಕೆಲವು ಮಠಗಳು, ಧರ್ಮ ಪ್ರಸಾರ, ಜನ ಜಾಗೃತಿಯನ್ನು ಗೌಣವಾಗಿಸಿ, ವ್ಯಾಪಾರಿ ಮನೋಭಾವನೆ ಬೆಳೆಸಿಕೊಳ್ಳುತ್ತಲಿವೆ. ಇನ್ನೂ ಕೆಲ ಮಠಗಳು, ರಾಜಕೀಯ ಗೂಢಾಚಾರರಂತೆ ವರ್ತಿಸುತ್ತಿವೆ ಎಂಬುದು ಭಕ್ತರ ಅಭಿಪ್ರಾಯ ಎಂದು ಹೇಳಿದರು. ಮಠಗಳಿಗೆ ಜಾತಿ ಕಾಲಿಡದಂತೆ, ಮೌಢ್ಯಕ್ಕೆ ಅವಕಾಶವಿಲ್ಲದಂತೆ, ಸ್ಥಾವರ ಪೂಜೆ ನಡೆಯದಂತೆ ಮಾಡಿ, ಸರ್ವರಿಗೂ ಸಮಾನ ಅವಕಾಶ ಕಲ್ಪಿಸುವ ಸಂಕಲ್ಪ ತೊಡಬೇಕೆಂದು ಕರೆ ನೀಡಿದರು.

ಶರಣ ಸಂದೇಶಗಳನ್ನು ಆಚರಣೆ ತರುವಂತಹ ಪ್ರಾಯೋಗಿಕ ತರಬೇತಿಯನ್ನು ಇಂದಿನ ಯುವ ಜನಾಂಗಕ್ಕೆ ನೀಡುವ ಅಗತ್ಯವಿದೆ ಎಂದರು.

ಬಡವ, ಬಲ್ಲಿದ ಎನ್ನದೇ, ಶಿಷ್ಯರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಗುರುತರ ಜವಾಬ್ದಾರಿ ಮಠಗಳದ್ದು. ಭಕ್ತನೊಬ್ಬ ತಪ್ಪು ಮಾಡಿದಾಗ ಶ್ರೀಮಂತನೋ, ಅಧಿಕಾರಿಯೋ, ಜನಪ್ರತಿನಿಧಿಯೇ ಆಗಿದ್ದಾನೆಂದು ಮೌನವಾಗಿರದೆ, ತಪ್ಪುಗಳನ್ನು ತಿದ್ದಿ ಮುನ್ನಡೆಸಬೇಕೆಂದರು.

ತಳಸಮುದಾಯದ ಜನರು, ಕುಡಿತ ಮತ್ತಿತರೆ ದುರಭ್ಯಾಸಗಳ ದಾಸರಾಗಿ, ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಕಾಲ ಬದಲಾಗಿ ಇದೀಗ ಎಲ್ಲಾ ವರ್ಗದ ಜನರೂ ಕುಡಿತದಂತಹ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ದುಶ್ಚಟ ನಿರ್ಮೂಲನೆಗೆ ರಾಜ್ಯದ ಮಠಾಧೀಶರು ಸಂಘಟಿತರಾಗಿ ಸರ್ಕಾರದ ಮೇಲೆ ಒತ್ತಡ ತಂದು ‘ಮದ್ಯಮುಕ್ತ’ ಕರ್ನಾಟಕ ಮಾಡಬೇಕು ಎಂದು ಶ್ರೀಗಳು ಹಿತ ನುಡಿದರು.

## ‘ನೀವಿದ್ದಲ್ಲಿಂದಲೇ ನನ್ನನ್ನು ಹಾರೈಸಿ’ : ಎಸ್ಸೆಸ್ ಗಣೇಶ್



ದಾವಣಗೆರೆ, ಆ. 20 - ನಾಡಿದ್ದು ದಿನಾಂಕ 22ರ ಶನಿವಾರ ನಡೆಯಲಿರುವ ಶ್ರೀ ಗಣೇಶ ಚತುರ್ಥಿ ಸಂದರ್ಭದಲ್ಲಿನ ತಮ್ಮ ಹುಟ್ಟುಹಬ್ಬಕ್ಕೆ ಹಿತೈಷಿಗಳು, ಅಭಿಮಾನಿಗಳು ಇದ್ದಲ್ಲಿಯೇ ಇದ್ದು ತಮ್ಮನ್ನು ಹಾರೈಸುವಂತೆ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಮನವಿ ಮಾಡಿಕೊಂಡಿದ್ದಾರೆ.

ಕೊರೊನಾ ವೈರಸ್ ತಾಂಡವವಾಡುತ್ತಿರುವ ಹಿನ್ನೆಲೆಯಲ್ಲಿ ಯಾರೂ ತಮ್ಮನ್ನು ಮುಖತಃ ಭೇಟಿಯಾಗದೇ ತಮ್ಮನ್ನು ಹರಸುವಂತೆ ಗಣೇಶ್ ಅವರು ಪತ್ರಿಕಾ ಹೇಳಿಕೆಯಲ್ಲಿ ಕೇಳಿಕೊಂಡಿದ್ದಾರೆ.

## ‘ಕರುಣಾ’ ದಲ್ಲಿ ಸಸಿ ಲಭ್ಯ

ದಾವಣಗೆರೆ, ಆ.20- ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಹೊಂಗೆ, ಬೇವು, ಬೆಟ್ಟದ ನೆಲ್ಲಿ ಸಸಿಗಳು ಲಭ್ಯವಿದ್ದು, ಅವಶ್ಯಕತೆ ಮತ್ತು ಆಸಕ್ತಿಯುಳ್ಳವರು ಮೊ: 9538024422 ಗೆ ಸಂಪರ್ಕಿಸುವುದು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte